ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ

# ಗ್ರಾಮೋದಯ

ತ್ರೈಮಾಸಿಕ ಪತ್ರಿಕೆ


| ಸಂಪುಟ-1 | ಸಂಚಿಕೆ-12 | ಅಕ್ಟೋಬರ್-ಡಿಸೆಂಬರ್ 2023 | ಪುಟಗಳು-36 |
|---|---|---|---|
| Vol-1 | Issue-12 | October-December 2023 | Pages-36 |





ವಿಶ್ವವಿದ್ಯಾಲಯದ ಸಬರಮತಿ ಆಶ್ರಮಕ್ಕೆ ಮಾನ್ಯ ಮುಖ್ಯಮಂತ್ರಿಗಳು, ವಿಧಾನ ಪರಿಷತ್ ಸಭಾಪತಿಗಳು, ಉಪಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು, ಇತರೆ ಸಚಿವರು, ಶಾಸಕರು, ಅಧಿಕಾರಿಗಳು, ಹಾಗೂ ಗಣ್ಯಮಾನ್ಯರು ಭೇಟಿ.

"ಗ್ರಾಮೀಣ ಪರಿವರ್ತನೆಯೇ ನಮ್ಮ ಸಂಕಲ್ಪ"



ಮಾನ್ಯ ಮುಖ್ಯಮಂತ್ರಿಗಳಿಂದ ವಿಶ್ವವಿದ್ಯಾಲಯದಲ್ಲಿ ನಿರ್ಮಾಣವಾಗುವ
ಅಧ್ಯಯನ ಶಾಲೆ-2ರ ಶಂಕುಸ್ಥಾಪನೆ




ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಐ.ಟಿ. ಮತ್ತು ಬಿ.ಟಿ. ಸಚಿವರು ವಿಶ್ವವಿದ್ಯಾಲಯದ ಸಹಕುಲಾಧಿಪತಿಗಳಾದ ಮಾನ್ಯಶ್ರೀ ಪ್ರಿಯಾಂಕ್ ಖರ್ಗೆಯವರ ಅಧ್ಯಕ್ಷತೆಯಲ್ಲಿ "ಕರ್ನಾಟಕದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಸಶಕ್ತೀಕರಣ ಕುರಿತು ದುಂಡು ಮೇಜಿನ ಸಮ್ಮೇಳನ".





# ಗ್ರಾಮೋದಯ ವಿಶೇಷಾಂಕ

ಮುಂಬರುವ ಜನವರಿ-ಮಾರ್ಚ್-2024ರ ಗ್ರಾಮೋದಯ ತ್ರೈಮಾಸಿಕದೊಂದಿಗೆ ಗ್ರಾಮೋದಯ ವಿಶೇಷಾಂಕ ಪತ್ರಿಕೆಯನ್ನು ಪ್ರಕಟಿಸಲಾಗುವುದು. ಈ ವಿಶೇಷಾಂಕದಲ್ಲಿ ವಿಶ್ವವಿದ್ಯಾಲಯದ ನಾಲ್ಕು ಘಟಿಕೋತ್ಸವಗಳ ವಿಶೇಷತೆ ಮತ್ತು ಪರಿಣಾಮಗಳ ಬಗ್ಗೆ ಅವಲೋಕನ, ವಿಶ್ವವಿದ್ಯಾಲಯ ನಾಲ್ಕು ವರ್ಷದ ಪ್ರಮುಖ ಚಟುವಟಿಕೆಗಳ ಬಗ್ಗೆ ಪಕ್ಷಿನೋಟ, ವಿಶ್ವವಿದ್ಯಾಲಯದ ಮುಂದಿನ ಯೋಜನೆಗಳ ಬಗ್ಗೆ ಶಾಸನಬದ್ಧ ಅಧಿಕಾರಿಗಳ ಸಂದರ್ಶನದ ಮುಖಾಂತರ ಆಶಯ ನುಡಿಗಳು, ವಿಶ್ವವಿದ್ಯಾಲಯದ ಗ್ರಾಮೋದಯ ತ್ರೈಮಾಸಿಕ ಪತ್ರಿಕೆಯ ಸಂಕ್ಷಿಪ್ತ ನೋಟ, ಸಂಶೋಧನಾ ಚಟುವಟಿಕೆಗಳು, ತರಬೇತಿ ಮತ್ತು ಪ್ರಕಟಣೆ ಬಗ್ಗೆ ಸಂಕ್ಷಿಪ್ತ ವರದಿ ಹಾಗೂ ವಿಶ್ವವಿದ್ಯಾಲಯದ ಚಟುವಟಿಕೆಗಳ ಬಗ್ಗೆ ಅವಲೋಕನ ವಿಷಯಗಳನ್ನೊಳಗೊಂಡ ವಿಶೇಷ ಲೇಖನಗಳು ಹಾಗೂ ಮಾಹಿತಿಯನ್ನು ಪ್ರಕಟಿಸಲಾಗುವುದು.

**ಸೂಚನೆ :-**

ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳ ಸಲಹೆ ಮೇರೆಗೆ, ಈ ತ್ರೈಮಾಸಿಕ ಪತ್ರಿಕೆಯು ಇನ್ನೂ ಹೆಚ್ಚು ಓದುಗರಿಗೆ ತಲುಪಬೇಕೆಂಬ ಆಶಯದಿಂದ ಗ್ರಾಮೋದಯ ವಿಶೇಷಾಂಕವನ್ನು ಏಪ್ರಿಲ್ 2024 ರಲ್ಲಿ ಪಕಟಿಸಲಾಗುತ್ತಿದ್ದು, ಈ ವಿಶೇಷಾಂಕಕ್ಕೆ ಅಧಿಕಾರಿ/ವಿದ್ಯಾರ್ಥಿಗಳು ಗ್ರಾಮೋದಯ ಚಟುವಟಿಕೆಗಳ ಬಗ್ಗೆ ಲೇಖನಗಳು, ಚಿತ್ರ, ಕವನ, ಕಥೆ ಇದ್ದಲ್ಲಿ ಸಿದ್ಧಪಡಿಸಿ ನೀಡಲು ಹಾಗೂ ಸಲಹೆಗಳನ್ನು ನೀಡಬೇಕಿದ್ದಲ್ಲಿ ಸಂಪಾದನಾ ಮಂಡಳಿಯೊಂದಿಗೆ ಚರ್ಚಿಸಲು ತಿಳಿಸಲಾಗಿದೆ ಹಾಗೂ ತರಬೇತಿ, ಪ್ರಕಟಣೆ ವಿಭಾಗದಿಂದ ವಿದ್ಯಾರ್ಥಿಗಳಿಗೂ ಹಾಗೂ ರೈತರಿಗೂ ಸ್ಪರ್ಧಾತ್ಮಕ ಚಟುವಟಿಕೆಗಳನ್ನು ಏರ್ಪಡಿಸಿ ಆ ಚಟುವಟಿಕೆಗಳ ಬಗ್ಗೆ ವಿಶೇಷಾಂಕದಲ್ಲಿ ಬಿಂಬಿಸಲಾಗುವುದು.

# ಪರಿವಿಡಿ


| | |
|---|---|
| 4 ಸಂಪಾದಕೀಯ | 5 ಕುಲಪತಿಗಳ ಸಂದೇಶ |
| 6 ಕುಲಸಚಿವರ ನುಡಿ | 7 ಹಣಕಾಸು ಅಧಿಕಾರಿಗಳ ನುಡಿ |
| 8 ವಿಶೇಷ ಲೇಖನ<br>"ಕೃಷಿ : ಲಾಭ ನಷ್ಟದ ಪ್ರಶ್ನೆ"<br>ಶ್ರೀ ಚನ್ನಪ್ಪ ಅಂಗಡಿ | 12 ವಿಶೇಷ ಸಮಾವೇಶ<br>"ವಚನ ದರ್ಶನ : ಭಕ್ತಿ–ಕಾಯಕ–ದಾಸೋಹ"<br>ಡಾ. ಸಂತೋಷಕುಮಾರ ಪಿ. ಕೆ. |
| 15 ವಿಶೇಷ ಸಂದರ್ಶನ<br>ಸಾವಯವ ಕೃಷಿಯಲ್ಲಿ ಸಾಧನೆಗೈದ ಸಾಧಕರ ಯಶೋಗಾಥೆ<br>ಡಾ. ಸಂಜಯ ಕುಮಾರ ಹಾರೋಬಿಡಿ<br>ಡಾ. ಉಡಚಪ್ಪ ಪೂಜಾರ್ | 18 ವಿಶೇಷ ಕಾರ್ಯಕ್ರಮ<br>ಸಬರಮತಿ ಆಶ್ರಮಕ್ಕೆ ಮಾನ್ಯ ಮುಖ್ಯಮಂತ್ರಿಗಳ ಭೇಟಿ ಹಾಗೂ ಅಧ್ಯಯನ ಶಾಲೆ–2ರ ಶಂಕುಸ್ಥಾಪನೆ<br>ಶ್ರೀ ಪ್ರಕಾಶ ಮಾಚೇನಹಳ್ಳಿ<br>ಡಾ. ಸಂಜಯಕುಮಾರ ಹಾರೋಬಿಡಿ |
| 22 ಲೇಖನ<br>Naipunya Kendra - Placement Cell<br>Dr. Shashikant D. H.<br>Dr. Chandana V. | 25 ಲೇಖನ<br>ಕ್ರೀಡೋತ್ಸವ–2023<br>ಡಾ. ವೀರೇಶಕುಮಾರ ಬಿ. ವಿಜಾಪುರ |
| 27 ಲೇಖನ<br>ಭೂಲೋಕದ ಸಂಜೀವಿನಿ ಅಮೃತ ಬಳ್ಳಿ<br>ಡಾ. ಲಿಂಗರಾಜು ನಿಡುವಣಿ | 29 ವಿಶ್ವವಿದ್ಯಾಲಯದ ಚಟುವಟಿಕೆಗಳು |




ಸೂಚನೆ :
ಲೇಖನಗಳನ್ನು ಪ್ರಕಟಣೆಗಾಗಿ ಆಯ್ಕೆ ಮಾಡುವ ಹಾಗೂ ಪ್ರಕಟಿಸುವ ಸೂಕ್ತ ಸಮಯದ ನಿರ್ಧಾರ ಸಂಪಾದಕರಿಗೆ ಸೇರಿರುತ್ತದೆ. ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸಂಪಾದಕ ಮಂಡಳಿಯ ಅಭಿಪ್ರಾಯವಲ್ಲ. ಈ ಆವೃತ್ತಿಯು ಮಾರಾಟಕ್ಕಿಲ್ಲ ದೂರವಾಣಿ: (08372) 200923, ಇಮೇಲ್–gramodayaksrdpru@gmail.com

## ಸಂಪಾದಕೀಯ

**ಗೌರವಾನ್ವಿತರಿಗೆ,**

ಪ್ರಸ್ತುತ ವರ್ಷದಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿ, ಮುಂಗಾರು ಹಾಗೂ ಹಿಂಗಾರು ಬೆಳೆಗಳ ಮೇಲೆ ವಿಪರೀತ ಪರಿಣಾಮದಿಂದ ರೈತಬಾಂಧವರು ತುಂಬಾ ತೊಂದರೆಯಲ್ಲಿರುವುದು ಎಲ್ಲರಿಗೂ ತಿಳಿದ ವಿಷಯ. ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ಸಾಮಾನ್ಯ ರೈತರಿಗೆ ಕಡಿಮೆ ಮಳೆಯಲ್ಲಿ ಬೆಳೆಯಬಹುದಾದ ಬೆಳೆಗಳ ಬಗ್ಗೆ ಮಾಹಿತಿ ನೀಡುವುದು ಅವಶ್ಯವಿದೆ. ಅಲ್ಲದೇ ನೀರನ್ನು ಮಿತವಾಗಿ ಬಳಸಿ ಅಧಿಕ ಇಳುವರಿ ನೀಡುವಂತಹ ಹಲವಾರು ಬೆಳೆಗಳಿದ್ದು, ರೈತಬಾಂಧವರು ಸಾಂಪ್ರದಾಯಿಕ ಕೃಷಿಯಿಂದ ಹೊರತುಪಡಿಸಿ, ಬದಲಾಗುತ್ತಿರುವ ವಾತವರಣಕ್ಕೆ ಹೊಂದುವಂತಹ ಬೆಳೆಗಳನ್ನು ಬೆಳೆಸುವುದರ ಬಗ್ಗೆ ಮಾಹಿತಿ ನೀಡಲು ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಿದ ರೈತ ದಿನಾಚರಣೆಯು ವಿಶೇಷತೆಯಾಗಿದೆ. ಈ ದಿಶೆಯಲ್ಲಿ ಶ್ರೀ ಚನ್ನಪ್ಪ ಅಂಗಡಿ, ಸಹಾಯಕ ಕೃಷಿ ನಿರ್ದೇಶಕರ ಲೇಖನ 'ಕೃಷಿ: ಲಾಭ ನಷ್ಟದ ಪ್ರಶ್ನೆ ವಿಶೇಷತೆಯಾಗಿದೆ. ಇದಲ್ಲದೇ ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸಿ ಉತ್ತಮ ಬೆಳೆಗಳನ್ನು ಬೆಳೆದು ಲಾಭ ಪಡೆಯುತ್ತಿರುವ ಶ್ರೀ ದೇವರಡ್ಡಿ ಅಗಸನಕೊಪ್ಪ ಇವರೊಂದಿಗೆ ಸಂದರ್ಶನ ಸಾಮಾನ್ಯ ಕೃಷಿಕರಿಗೆ ಉಪಯೋಗ ವಾಗಲಿದೆ ಎಂಬುದು ನನ್ನ ವಿಶ್ವಾಸವಾಗಿದೆ.

ಗದಗ ಜಿಲ್ಲೆಯಲ್ಲಿ ಕರ್ನಾಟಕ ಸಂಭ್ರಮ–50ರ ವಿಶೇಷ ಸಂಭ್ರಮಾಚರಣೆಯನ್ನು ವಿಶ್ವವಿದ್ಯಾಲಯದಲ್ಲಿಯೂ ಸಹ ಸಂಭ್ರಮಿಸಿ, ರಾಜ್ಯ ವಿಧಾನ ಪರಿಷತ್ ಸಭಾಪತಿಗಳು, ಮಾನ್ಯ ಮುಖ್ಯಮಂತ್ರಿಗಳು, ಉಪಮುಖ್ಯ ಮಂತ್ರಿಗಳು, ಸಚಿವರು, ಶಾಸಕರು ಹಾಗೂ ಗಣ್ಯಮಾನ್ಯರು ವಿಶ್ವವಿದ್ಯಾಲಯದ ಸಬರಮತಿ ಆಶ್ರಮಕ್ಕೆ ಭೇಟಿ ಹಾಗೂ ಅಧ್ಯಯನ ಶಾಲೆ–2ರ ಶಂಕು ಸ್ಥಾಪನೆ ವಿಶ್ವವಿದ್ಯಾಲಯಕ್ಕೆ ಮೆರುಗು ನೀಡಿದೆ.

ಮುಂಬರುವ ಜನವರಿ–ಮಾರ್ಚ್–2024ರ ತ್ರೈಮಾಸಿಕ ಸಂಚಿಕೆಯೊಂದಿಗೆ ಗ್ರಾಮೋದಯ ವಿಶೇಷ ಸಂಚಿಕೆಯನ್ನು ಪ್ರಕಟಿಸಲು ಸಿದ್ಧತೆಯನ್ನು ಮಾಡಿಕೊಳ್ಳುತ್ತಿರುವ ವಿಷಯವನ್ನು ಮಾನ್ಯರ ಗಮನಕ್ಕೆ ತರಬಯಸುತ್ತೇನೆ.

ವಿಶ್ವವಿದ್ಯಾಲಯದ ನೂತನ ಕುಲಸಚಿವರಾಗಿ ಅಧಿಕಾರ ಸ್ವೀಕರಿಸಿರುವ ಮಾನ್ಯ ಪ್ರೊ. ಡಾ. ಸುರೇಶ ವಿ. ನಾಡಗೌಡರ ಇವರಿಗೆ ಹಾರ್ದಿಕ ಅಭಿನಂದನೆಗಳು.

ಪ್ರಸ್ತುತ 'ಗ್ರಾಮೋದಯ' ಸಂಚಿಕೆಯ ಸಂಕಲನಕ್ಕೆ ಅನುವುಮಾಡಿಕೊಟ್ಟ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರಿಗೆ, ಕುಲಸಚಿವರಿಗೆ, ವಿತ್ತಾಧಿಕಾರಿಗಳಿಗೆ ನನ್ನ ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಸಂಪಾದಕೀಯ ಮಂಡಳಿ ಹಾಗೂ ವಿಶ್ವವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿಗಳಿಗೆ, ಲೇಖಕರಿಗೆ ಹಾಗೂ ವಿನ್ಯಾಸ ರಚಿಸಿ ಮತ್ತು ಅಂದವಾಗಿ ಮುದ್ರಿಸಿದ ಮೆ॥ ಕಾಂಬಳೆ ಪ್ರಿಂಟರ್ಸ್, ಗದಗ ಇವರಿಗೆ ನಾನು ಚಿರಋಣಿಯಾಗಿದ್ದೇನೆ.

**ಡಾ. ಅಬ್ದುಲ್ ಅಜೀಜ್ ಮುಲ್ಲಾ**
ಪ್ರಧಾನ ಸಂಪಾದಕರು


## ಸಂಪಾದಕೀಯ ಮಂಡಳಿ :



**ಅಧ್ಯಕ್ಷರು:**
**ಪ್ರೊ. ಡಾ. ಸುರೇಶ ವಿ. ನಾಡಗೌಡರ**
ಕುಲಸಚಿವರು



**ಪ್ರಧಾನ ಸಂಪಾದಕರು:**
**ಡಾ. ಅಬ್ದುಲ್ ಅಜೀಜ್ ಮುಲ್ಲಾ**
ಸಹಾಯಕ ನಿರ್ದೇಶಕರು,
ತರಬೇತಿ, ಪ್ರಕಟಣೆ ಹಾಗೂ ಮೇಲ್ವಿಚಾರಣೆ ಕೇಂದ್ರ



**ಸದಸ್ಯರು**
**ಶ್ರೀ ಆನಂದಗೌಡ ಪಿ. ಫಕೀರಗೌಡ**
ಸಹಾಯಕ ಗ್ರಂಥಪಾಲಕರು



**ಸದಸ್ಯರು**
**ಶ್ರೀ ಚಂದ್ರಪ್ಪ ಬಾರಂಗಿ**
ಕನ್ನಡ ಅಧ್ಯಾಪಕರು



**ಸದಸ್ಯರು**
**ಡಾ. ಸಂಜಯಕುಮಾರ ಶಿ. ಹಾರೋಬಿಡಿ**
ಸಂಯೋಜಕರು, ತರಬೇತಿ ಪ್ರಕಟಣೆ ಹಾಗೂ ಮೇಲ್ವಿಚಾರಣೆ ಕೇಂದ್ರ



**ಸದಸ್ಯ ಕಾರ್ಯದರ್ಶಿ**
**ಕು. ರಾಧಿಕಾ ಕೆ. ಆರ್.**



**ಸದಸ್ಯ ಕಾರ್ಯದರ್ಶಿ**
**ಕು. ಪ್ರದೀಪ ಅಚ್ಚಳ್ಳಿ**

## ಸಹ ಸದಸ್ಯರು :

**ಶ್ರೀ ಗಿರೀಶ್ ದೀಕ್ಷಿತ್**
ಸಹಾಯಕ ನಿರ್ದೇಶಕರು, ಸಂಶೋಧನೆ, ಅನ್ವೇಷಣೆ ಹಾಗೂ ಮೌಲ್ಯಮಾಪನ ಕೇಂದ್ರ

**ಡಾ. ಶ್ರೀಧರ ಹಾದಿಮನಿ**
ಎಂ.ಎ. ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್, ಕಾರ್ಯಕ್ರಮ ಸಂಯೋಜಕರು

**ಶ್ರೀ ಎಂ. ಬಿ. ಚನ್ನಪ್ಪಗೌಡರ,**
ಕುಲಪತಿಗಳ ವಿಶೇಷಾಧಿಕಾರಿಗಳು

**ಡಾ. ಸಾವಿತ್ರಿ ಬ್ಯಾಡಗಿ**
ಎಂ.ಎಸ್ಸಿ. ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ, ಕಾರ್ಯಕ್ರಮ ಸಂಯೋಜಕರು

**ಶ್ರೀ ಪ್ರವೀಣ ಅಂಕಲಕೋಟಿ**
ಎಂ.ಎ. ಸಾರ್ವಜನಿಕ ಆಡಳಿತ, ಕಾರ್ಯಕ್ರಮ ಸಂಯೋಜಕರು

**ಡಾ. ಅಭಯಕುಮಾರ ಗಸ್ತಿ**
ಎಂ.ಕಾಂ., ಕಾರ್ಯಕ್ರಮ ಸಂಯೋಜಕರು

**ಡಾ. ನೀಲಮ್ಮ ಆರ್. ಕೊಲಗೇರಿ**
ಎಂ.ಬಿ.ಎ. ಕಾರ್ಯಕ್ರಮ ಸಂಯೋಜಕರು

**ಡಾ. ನಾಗವೇಣಿ ಎಸ್. ಜೆ.**
ಎಂ.ಪಿ.ಹೆಚ್., ಕಾರ್ಯಕ್ರಮ ಸಂಯೋಜಕರು

**ಡಾ. ವೀರೇಶ್‌ಕುಮಾರ್ ವಿಜಾಪೂರ,**
ಸಹಾಯಕ ನಿರ್ದೇಶಕರು, ದೈಹಿಕ ಶಿಕ್ಷಣ

**ಡಾ. ಸಂಗನಗೌಡ ಪಾಟೀಲ**
ಎಂ.ಎ. ಅರ್ಥಶಾಸ್ತ್ರ, ಕಾರ್ಯಕ್ರಮ ಸಂಯೋಜಕರು

**ಶ್ರೀ ಸುರೇಶ ಲಮಾಣಿ**
ಎಂ.ಎಸ್ಸಿ. ಜಿಯೋಇನ್ಫಾರ್ಮೆಟಿಕ್ಸ್, ಕಾರ್ಯಕ್ರಮ ಸಂಯೋಜಕರು

**ಶ್ರೀ ಸೋಮಲಿಂಗ ಕರ್ಜಿ**
ಎಂ.ಎಸ್.ಡಬ್ಲ್ಯೂ, ಕಾರ್ಯಕ್ರಮ ಸಂಯೋಜಕರು

# ಕುಲಪತಿಗಳ ಸಂದೇಶ



**ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ**
ಕುಲಪತಿಗಳು,
ಕ.ರಾ.ಗ್ರಾ. ಮತ್ತು ಪಂ.ರಾ.
ವಿಶ್ವವಿದ್ಯಾಲಯ, ಗದಗ

ವಿಶ್ವವಿದ್ಯಾಲಯದ ಗ್ರಾಮೋದಯ ತ್ರೈಮಾಸಿಕ ಪತ್ರಿಕೆಯ ಹನ್ನೊಂದು ಸಂಚಿಕೆಗಳು ಬಿಡುಗಡೆಗೊಂಡಿದ್ದು, ಹನ್ನೆರಡನೇ ಸಂಚಿಕೆಯು ಪ್ರಕಟಣೆಗೊಳ್ಳುತ್ತಿರುವುದು ಸಂತಸದ ವಿಷಯ. ಈ ಸಂಚಿಕೆಯು 2023ರ ಕೊನೆಯ ಆವೃತ್ತಿಯಾಗಿದೆ. ಎಂದಿನಂತೆ, ಈ ಸಂಚಿಕೆಯಲ್ಲಿಯೂ ಗಣ್ಯರ, ಸಿಬ್ಬಂದಿಗಳ ಹಾಗೂ ವಿದ್ಯಾರ್ಥಿಗಳ ಲೇಖನಗಳು ಮತ್ತು ವಿಶ್ವವಿದ್ಯಾಲಯದಲ್ಲಿ ನಡೆದ ವಿಶೇಷ ಕಾರ್ಯಕ್ರಮಗಳು, ಸಮಾವೇಶಗಳು ಹಾಗೂ ಮುಂತಾದವುಗಳ ವಿವರವನ್ನು ಬಿಂಬಿಸಲಾಗಿದೆ.

ವಿಶ್ವವಿದ್ಯಾಲಯಕ್ಕೆ ನೂತನ ಕುಲಸಚಿವರಾಗಿ ಅಧಿಕಾರ ಸ್ವೀಕರಿಸಿದ ಪ್ರೊ. ಸುರೇಶ ವಿ. ನಾಡಗೌಡರವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಹಿಂದಿನ 3 ವರ್ಷದ ಅವಧಿಯಲ್ಲಿ ಕುಲಸಚಿವರಾಗಿ ಸೇವೆ ಸಲ್ಲಿಸಿದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರಿಗೆ ಹೃದಯಪೂರ್ವಹಕ ಧನ್ಯವಾದಗಳು.

ಈ ಸಂಚಿಕೆಯಲ್ಲಿ ಪ್ರಮುಖವಾಗಿ ಕೃಷಿ ಲಾಭದಾಯವೆ? ಲಾಭ ಎಂದರೇನು? ಲಾಭ, ವ್ಯಾಪಾರ –ವಹಿವಾಟಿಗೆ ಸಂಬಂಧಿಸಿದ ವಿಷಯದ ಬಗ್ಗೆ ಬರೆದಿರು ಶ್ರೀ ಚನ್ನಪ್ಪ ಅಂಗಡಿಯವರ "ಕೃಷಿ: ಲಾಭ ನಷ್ಟದ ಪ್ರಶ್ನೆ" ಎಂಬ ಲೇಖನವು ವಿಶೇಷವಾಗಿದೆ.

ಈ ಆವೃತ್ತಿಯಿಂದ ಸಾವಯವ ಕೃಷಿಯಲ್ಲಿ ಸಾಧನೆ ಮಾಡಿದ ರೈತರ ಸಂದರ್ಶನ ಪ್ರಕಟವಾಗಲಿದೆ. ಈ ಹಿನ್ನೆಲೆಯಲ್ಲಿ ಸಾವಯವ ಮಾದರಿಯಲ್ಲಿ ಕೃಷಿ ಮಾಡುತ್ತಿರುವ ಶ್ರೀ ದೇವರಡ್ಡಿ ಅಗಸನಕೊಪ್ಪ ಅವರ ವಿಶೇಷ ಸಂದರ್ಶನ ಪ್ರಕಟವಾಗುತ್ತಿರುವುದು ಸಂತಸದ ಸಂಗತಿಯಾಗಿದೆ. ವಿಶ್ವವಿದ್ಯಾಲಯದ ನೈಪುಣ್ಯ ಕೇಂದ್ರ–ಉದ್ಯೋಗ ವಿನಿಮಯ ಕೇಂದ್ರ ಇವರ ಮುಂದಾಳತ್ವದಲ್ಲಿ "ಉನ್ನತಿ–ಪ್ಲೇಸ್ಮೆಂಟ್ ಡ್ರೈವ್–2023" ಅನ್ನು ನಾಲ್ಕನೇಯ ಸೆಮಿಸ್ಟರ್‌ನ ಎಲ್ಲಾ ಸ್ನಾತಕೋತ್ತರ ಪದವೀಧರರಿಗೂ ಆಯೋಜಿಸಲಾಗಿತ್ತು. ಈ ಉದ್ಯೋಗ ಮೇಳದಲ್ಲಿ ಒಟ್ಟು 20 ಕಂಪನಿಗಳು ಭಾಗವಹಿಸಿ, ಸಂದರ್ಶನ ತೆಗೆದುಕೊಂಡಿದ್ದು, ಇದರಿಂದ ವಿದ್ಯಾರ್ಥಿಗಳಿಗೆ ಮುಂದಿನ ಭವಿಷ್ಯ ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಮಾರ್ಗದರ್ಶನ ಸಿಗಲಿದೆ.

ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು, ಉಪ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಡಿ. ಕೆ. ಶಿವಕುಮಾರರವರು, ಸಚಿವರಾದ ಶ್ರೀ ಹೆಚ್. ಕೆ. ಪಾಟೀಲ್ ಹಾಗೂ ಇನ್ನಿತರೆ ಶಾಸಕರಗಳನ್ನೊಳಗೊಂಡು ವಿಶ್ವವಿದ್ಯಾಲಯದ ಸಬರಮತಿ ಆಶ್ರಮಕ್ಕೆ ಕರ್ನಾಟಕ ಸಂಭ್ರಮ –50ರ ಸುಸಂದರ್ಭದಲ್ಲಿ ಭೇಟಿ ನೀಡಿ, ಆವರಣದಲ್ಲಿ ನಿರ್ಮಾಣಗೊಳ್ಳಲಿರುವ ಅಧ್ಯಯನ ಶಾಲೆ–2 (ಹಂತ–1) ಕಟ್ಟಡದ ಶಂಕುಸ್ಥಾಪನೆಯನ್ನು ನೆರವೇರಿಸಿದ್ದು ಸ್ಮರಣೀಯವಾಗಿದೆ.

ವಿಶ್ವವಿದ್ಯಾಲಯಗಳು ಇರುವುದೇ ಜ್ಞಾನವನ್ನು ವೃದ್ಧಿಗೊಳಿಸಲು, ಚರ್ಚೆ ಮೂಲಕ ಬೌದ್ಧಿಕ ಮಟ್ಟ ಬೆಳೆಸಲು ಗ್ರಾಮೀಣಾಭಿವೃದ್ಧಿ ಮತ್ತು ಭಾರತೀಯ ಸಂಸ್ಕೃತಿ ವಿಷಯದ ನಡುವೆ ಹೆಚ್ಚಿನ ವ್ಯತ್ಯಾಸ ಇಲ್ಲ. ಜನರಿಗೆ ಗ್ರಾಮೀಣಾಭಿವೃದ್ಧಿ ಕುರಿತು ಬಸವಣ್ಣ, ಅಲ್ಲಮಪ್ರಭು ಹಾಗೂ ಮುಂತಾದ ವಚನಕಾರರ ವಚನಗಳಿಂದ ಅರ್ಥ ಮಾಡಿಸುವ ಸಲುವಾಗಿ ವಿಶ್ವವಿದ್ಯಾಲಯವು "ವಚನ ದರ್ಶನ : ಭಕ್ತಿ–ಕಾಯಕ–ದಾಸೋಹ" ಎಂಬ ವಿಷಯದ ಕುರಿತು ಮೂರು ದಿನಗಳ ಸಮ್ಮೇಳನವನ್ನು ವಿವಿಧ ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಂಸ್ಥೆಗಳ ಸಹಯೋಗದೊಂದಿಗೆ ವಿಶ್ವವಿದ್ಯಾಲಯದ ಆವರಣದಲ್ಲಿ ಏರ್ಪಡಿಸಲಾಗಿತ್ತು.

2023–24ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾಲಯದ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮವಾದ "ದೀಕ್ಷಾರಂಭ" ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಬಿ. ಕೆ. ರವಿ ಅವರು ಆಗಮಿಸಿದ್ದು, ದೀಕ್ಷಾರಂಭ ಕಾರ್ಯಕ್ರಮದ ಸಾನಿಧ್ಯವನ್ನು ಪರಮಪೂಜ್ಯ ನಂದಿವೇರಿ ಮಠದ ಶ್ರೀ ಶಿವಕುಮಾರ ಸ್ವಾಮೀಜಿಗಳು ವಹಿಸಿ ಎಲ್ಲಾ ವಿದ್ಯಾರ್ಥಿಗಳಿಗೂ ಆಶೀರ್ವದಿಸಿರುವುದು ಸಂತಸದ ವಿಷಯವಾಗಿದೆ.

ಈ ಎಲ್ಲಾ ಕಾರ್ಯಚಟುವಟಿಕೆಗಳನ್ನು ಕ್ರೋಢೀಕರಿಸಿ ಗ್ರಾಮೋದಯ ತ್ರೈಮಾಸಿಕ ಪತ್ರಿಕೆಯ ಹನ್ನೆರಡನೇ ಸಂಚಿಕೆಯಲ್ಲಿ ವಿವರವಾಗಿ ಬಿಂಬಿಸಿರುವ ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರ ಹಾಗೂ ಗ್ರಾಮೋದಯ ತ್ರೈಮಾಸಿಕ ಪತ್ರಿಕೆಯ ಸಂಪಾದಕೀಯ ಮಂಡಳಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.

**ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ**
ಕುಲಪತಿಗಳು

# ಕುಲಸಚಿವರ ನುಡಿ



**ಪ್ರೊ. ಡಾ. ಸುರೇಶ ವಿ. ನಾಡಗೌಡರ**
ಕುಲಸಚಿವರು,
ಕ.ರಾ.ಗ್ರಾ. ಮತ್ತು ಪಂ.ರಾ. ವಿಶ್ವವಿದ್ಯಾಲಯ, ಗದಗ

'ಗ್ರಾಮೋದಯ' ತ್ರೈಮಾಸಿಕ ಪತ್ರಿಕೆಯು ವಿಶ್ವವಿದ್ಯಾಲಯದ ಸಮಗ್ರ ಹಾಗೂ ಕ್ರೋಢೀಕರಿಸಿದ ಮಾಹಿತಿಯನ್ನು ಸ್ಪಷ್ಟವಾಗಿ ಹಾಗೂ ವಿವರವಾಗಿ ಮುದ್ರಿಸಿ, ಎಲ್ಲರಿಗೂ ತಲುಪಿಸುವತ್ತ ಗಮನ ಸೆಳೆಯುತ್ತಿದೆ. ಈ ತ್ರೈಮಾಸಿಕ ಪತ್ರಿಕೆಯ ಹನ್ನೊಂದು ಸಂಚಿಕೆಗಳು ಬಿಡುಗಡೆಗೊಂಡಿದ್ದು, ಹನ್ನೆರಡನೇ ಸಂಚಿಕೆಯೂ ಬಿಡುಗಡೆಗೊಳ್ಳುತ್ತಿರುವುದು ಸಂತಸದ ವಿಷಯ. ಎಂದಿನಂತೆ, ಈ ಸಂಚಿಕೆಯಲ್ಲಿಯೂ ಗಣ್ಯರ, ವಿಶ್ವವಿದ್ಯಾಲಯದ ಸಿಬ್ಬಂದಿಗಳ ಹಾಗೂ ವಿದ್ಯಾರ್ಥಿಗಳ ಲೇಖನಗಳು ಮತ್ತು ವಿಶ್ವವಿದ್ಯಾಲಯದಲ್ಲಿ ಜರುಗಿಸಲಾದ ವಿಶೇಷ ಕಾರ್ಯಕ್ರಮಗಳ ಬಗ್ಗೆ ಬಿಂಬಿಸಲಾಗಿದ್ದು, ಅವುಗಳಲ್ಲಿ ಪ್ರಮುಖವಾಗಿ ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು, ಉಪ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಡಿ. ಕೆ. ಶಿವಕುಮಾರರವರು, ಸಚಿವರಾದ ಶ್ರೀ ಹೆಚ್. ಕೆ. ಪಾಟೀಲ್ ಹಾಗೂ ಇನ್ನಿತರೆ ಶಾಸಕರನ್ನೊಳಗೊಂಡು ವಿಶ್ವವಿದ್ಯಾಲಯದ ಸಬರಮತಿ ಆಶ್ರಮಕ್ಕೆ ಭೇಟಿ ನೀಡಿ, ಆವರಣದಲ್ಲಿ ನಿರ್ಮಾಣಗೊಳ್ಳಲಿರುವ ಅಧ್ಯಯನ ಶಾಲೆ-2 (ಹಂತ-1) ಕಟ್ಟಡದ ಶಂಕುಸ್ಥಾಪನೆಯನ್ನು ನೆರವೇರಿಸಲಾಯಿತು. ವಿಶ್ವವಿದ್ಯಾಲಯವು ಗ್ರಾಮೀಣ ಪರಿವರ್ತನೆಯತ್ತ ಹಲವಾರು ಹೆಜ್ಜೆಗಳನ್ನು ಇಡುತ್ತಿದ್ದು, ಗ್ರಾಮೀಣ ಬದುಕಿಗೆ ನೇರವಾಗಿಯೇ ಸಂಬಂಧ ಹೊಂದಿರುವ ವಚನ ಸಾಹಿತ್ಯದ ಜ್ಞಾನವನ್ನೂ ಎಲ್ಲಡೆ ಪಸರಿಸಬೇಕೆಂಬ ಉದ್ದೇಶದಿಂದ "ವಚನ ದರ್ಶನ : ಭಕ್ತಿ-ಕಾಯಕ-ದಾಸೋಹ" ಎಂಬ ವಿಷಯದ ಕುರಿತು ವಿಶ್ವವಿದ್ಯಾಲಯದಲ್ಲಿ ಮೂರು ದಿನಗಳ ಸಮ್ಮೇಳನವನ್ನು ಆಯೋಜಿಸಲಾಗಿತ್ತು.

ವಿಶ್ವವಿದ್ಯಾಲಯದ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ "ದೀಕ್ಷಾರಂಭ"ವನ್ನು ಆಯೋಜಿಸಲಾಗಿದ್ದು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ಕ್ಷೇತ್ರಗಳ ಅಭಿವೃದ್ಧಿ ದೃಷ್ಟಿಕೋನವನ್ನು ಇಟ್ಟುಕೊಂಡು ಸ್ಥಾಪಿತವಾದ ವಿಶ್ವವಿದ್ಯಾಲಯ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಪ್ರಿಯಾಂಕ್ ಖರ್ಗೆಯವರ ಮಾರ್ಗದರ್ಶನದಲ್ಲಿ ಹಾಗೂ ಕಳೆದ ಏಳು ವರ್ಷಗಳ ಹಿಂದೆ ಅಂದಿನ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಾದ ಡಾ. ಎಚ್. ಕೆ. ಪಾಟೀಲರವರ ಆಶಯದಂತೆ, ಈ ವಿಶ್ವವಿದ್ಯಾಲಯ ಎತ್ತರಕ್ಕೆ ಬೆಳೆಯುತ್ತಿದೆ. ಇದರ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕೆಂದು ಆಶಿಸುತ್ತಾ, ವಿಶ್ವವಿದ್ಯಾಲಯಕ್ಕೆ ಪ್ರವೇಶ ಪಡೆಯುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಶುಭವಾಗಲಿ.

ಗ್ರಾಮೋದಯ ತ್ರೈಮಾಸಿಕ ಪತ್ರಿಕೆಯನ್ನು ಹೊರತರಲು ಪ್ರೇರಣೆಯಾದ ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ತ್ರೈಮಾಸಿಕ ಪತ್ರಿಕೆಯ ಹನ್ನೆರಡನೇ ಆವೃತ್ತಿಯಲ್ಲಿ ಈ ಎಲ್ಲಾ ಚಟುವಟಿಕೆಗಳ ಬಗ್ಗೆ ವಿವರವಾಗಿ ಬಿಂಬಿಸಿರುವ ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರ ಹಾಗೂ ಪ್ರಧಾನ ಸಂಪಾದಕರು, ಸಹ ಸಂಪಾದಕರು, ಸದಸ್ಯರುಗಳು ಹಾಗೂ ಸಲಹಾ ಮಂಡಳಿ ಸದಸ್ಯರುಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಪ್ರೊ. ಡಾ. ಸುರೇಶ ವಿ. ನಾಡಗೌಡರ**
ಕುಲಸಚಿವರು

# ಹಣಕಾಸು ಅಧಿಕಾರಿಗಳ ನುಡಿ



**ಶ್ರೀ ಪ್ರಶಾಂತ ಜೆ. ಸಿ.**
ವಿತ್ತಾಧಿಕಾರಿಗಳು,
ಕ.ರಾ.ಗ್ರಾ. ಮತ್ತು ಪಂ.ರಾ.
ವಿಶ್ವವಿದ್ಯಾಲಯ, ಗದಗ

ವಿಶ್ವವಿದ್ಯಾಲಯದ "ಗ್ರಾಮೋದಯ" ತ್ರೈಮಾಸಿಕ ಪತ್ರಿಕೆಯು 2022 ಜನವರಿಯಿಂದ ಈವರೆಗೂ ಹನ್ನೊಂದು ಸಂಚಿಕೆಗಳು ಬಿಡುಗಡೆಗೊಂಡಿದ್ದು, ಹನ್ನೆರಡನೇ ಸಂಚಿಕೆಯು ಪ್ರಕಟಣೆಗೊಳ್ಳುತ್ತಿರುವುದು ಸಂತಸದ ವಿಷಯವಾಗಿದ್ದು, ಈ ಸಂಚಿಕೆಯು 2023 ರ ಕೊನೆಯ ಸಂಚಿಕೆಯಾಗಿದೆ.

ಎಂದಿನಂತೆ, ಈ ಸಂಚಿಕೆಯಲ್ಲಿಯೂ ಗಣ್ಯರ, ಸಿಬ್ಬಂದಿಗಳ ಹಾಗೂ ವಿದ್ಯಾರ್ಥಿಗಳ ಲೇಖನಗಳು, ವಿಶ್ವವಿದ್ಯಾಲಯದಲ್ಲಿ ನಡೆದ ವಿಶೇಷ ಕಾರ್ಯಕ್ರಮಗಳು, ಸಂದರ್ಶನ, ಸಮಾವೇಶಗಳು ಹಾಗೂ ಮುಂತಾದವುಗಳ ವಿವರವನ್ನು ಬಿಂಬಿಸಲಾಗಿದೆ. ಪ್ರಮುಖವಾಗಿ ಶ್ರೀ ಅಂಗಡಿಯವರು ಬರೆದಿರುವ "ಕೃಷಿ : ಲಾಭ ನಷ್ಟದ ಪ್ರಶ್ನೆ" ಲೇಖನವು ವಿಶೇಷಗಿದ್ದು, ಒಟ್ಟು ಆದಾಯದಲ್ಲಿ ಒಟ್ಟು ಖರ್ಚನ್ನು ಕಳೆದು ಉಳಿಯುವುದಷ್ಟೇ ಲಾಭವಲ್ಲ, ಪರಿಸರ ವ್ಯವಸ್ಥೆಯ ಭಾಗವಾಗಿರುವ ಕೃಷಿಯ ಯಶಸ್ಸನ್ನು ಅಳೆಯಲು ಹಣವೊಂದೇ ಮಾನದಂಡವಲ್ಲ ಎಂಬುದನ್ನು ಈ ಲೇಖನದಲ್ಲಿ ತಿಳಿಯಪಡಿಸಿದ್ದಾರೆ.

ಕೆಲವು ಸಾಧಕರು ಕೃಷಿಯನ್ನೆ ತಮ್ಮ ಕ್ಷೇತ್ರವನ್ನಾಗಿಸಿಕೊಂಡು ಆಧಾಯವನ್ನು ಇಮ್ಮಡಿಗೊಳಿಸಿಕೊಳ್ಳುತ್ತಿದ್ದು, ಅಂತಹ ಸಾಧಕರಾದ ಶ್ರೀ ದೇವರಡ್ಡಿ ಅಗಸನಕೊಪ್ಪ ಅವರ ಸಂದರ್ಶನವನ್ನು ವಿಶ್ವವಿದ್ಯಾಲಯದ ವತಿಯಿಂದ ಮಾಡಿರುವುದು ಶ್ಲಾಘನೀಯವಾಗಿದೆ.

ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ಅವರು ವಿಶ್ವವಿದ್ಯಾಲಯದಲ್ಲಿ ಸುಮಾರು 10830 ಚದರ ಅಡಿಯ ವಿಸ್ತೀರ್ಣದಲ್ಲಿ ಹಾಗೂ ಅಂದಾಜು 5ಕೋಟಿ ರೂಪಾಯಿಗಳ ವೆಚ್ಚದ ಮೊತ್ತದಲ್ಲಿ ನಿರ್ಮಾಣವಾಗಲಿರುವ ಅಧ್ಯಯನ ಶಾಲೆ–2ರ ಶಂಕುಸ್ಥಾಪನೆಯನ್ನು ನೆರವೇರಿಸಿದ್ದು, ಈ ಸಂದರ್ಭದಲ್ಲಿ ಉಪಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಡಿ. ಕೆ. ಶಿವಕುಮಾರ, ಗೌರವಾನ್ವಿತ ಸಚಿವರುಗಳು ಮತ್ತು ಗಣ್ಯಮಾನ್ಯರುಗಳು ಈ ಶಂಕುಸ್ಥಾಪನೆ ಕಾರ್ಯಕ್ಕೆ ಕೈಜೋಡಿಸಿರುವುದು ಹೆಮ್ಮೆಯ ವಿಷಯವಾಗಿದೆ.

ಈ ಎಲ್ಲಾ ಚಟುವಟಿಕೆಗಳ ಬಗ್ಗೆ ಗ್ರಾಮೋದಯ ತ್ರೈಮಾಸಿಕ ಪತ್ರಿಕೆಯ 12ನೇ ಆವೃತ್ತಿಯಲ್ಲಿ ವಿವರವಾಗಿ ಬಿಂಬಿಸಿರುವ ಪ್ರಧಾನ ಸಂಪಾದಕರಾದ ಡಾ.ಅಬ್ದುಲ್ ಅಜೀಜ್ ಮುಲ್ಲಾ ಇವರಿಗೆ ಮತ್ತು ಸಹ ಸಂಪಾದಕರು, ಸದಸ್ಯರುಗಳು ಹಾಗೂ ಸಲಹಾ ಮಂಡಳಿ ಸದಸ್ಯರುಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ತ್ರೈಮಾಸಿಕ ಪತ್ರಿಕೆಯು ಇನ್ನೂ ಸುಂದರವಾಗಿ ಮೂಡಿಬರಲಿ, ಇನ್ನೂ ಹೆಚ್ಚು ಓದುಗರನ್ನು ತಲುಪಿ ಯಶಸ್ವಿಯಾಗಲಿ ಎಂದು ಆಶಿಸುತ್ತೇನೆ.

**ಶ್ರೀ ಪ್ರಶಾಂತ್ ಜೆ. ಸಿ.**

ಹಣಕಾಸು ಅಧಿಕಾರಿಗಳು

# ಕೃಷಿ : ಲಾಭ ನಷ್ಟದ ಪ್ರಶ್ನೆ



**ಶ್ರೀ ಚನ್ನಪ್ಪ ಅಂಗಡಿ**
ಸಹಾಯಕ ಕೃಷಿ ನಿರ್ದೇಶಕರು,
'ಕಾಯಕ', ಕುಮಾರೇಶ್ವರನಗರ,
ಬೆಳಗಾವಿ ರಸ್ತೆ, ಧಾರವಾಡ

ಕೃಷಿ ಲಾಭದಾಯಕವೆ? ಪ್ರಶ್ನೆ ಬಹಳ ನೇರ, ಸರಳ ಆದರೆ, ಉತ್ತರ? ಅಷ್ಟೇ ಸಂಕೀರ್ಣ. ನಾವು ಕೊಡುವ ಉತ್ತರವೇ ಪ್ರಶ್ನೆಯಾಗುವ ಸಾಧ್ಯತೆ ಕೂಡ ಇದೆ. ಒಕ್ಕಲುತನವೆಂದರೆ ಹಾಗೆಯೇ. ಎಷ್ಟೊಂದು ಸುಧಾರಣೆಯಾಗಿದೆಯೆಂದು ಹೇಳಿಕೊಂಡರೂ ಇವತ್ತು ಕೂಡ ವ್ಯವಸಾಯ ವಿಜ್ಞಾನವೇ, ಕಲೆಯೇ? ಎಂಬ ಮೂಲಭೂತ ಪ್ರಶ್ನೆಯನ್ನು ಯಾರು ಯಾರಿಗಾದರೂ ಕೇಳುವ ಸಾಧ್ಯತೆಯಿದೆ. ಹಾಗಾದರೆ, ಕೃಷಿ ಲಾಭದಾಯವೇ?

ಲಾಭ ಎಂದರೇನು? ಲಾಭ, ವ್ಯಾಪಾರ–ವಹಿವಾಟಿಗೆ ಸಂಬಂಧಿಸಿದ ವಿಷಯ. ಹತ್ತು ಹಾಕಿ ಇಪ್ಪತ್ತು ತೆಗೆಯುವುದು ಲಾಭ. ಹತ್ತನ್ನು ಹನ್ನೊಂದು ಮಾಡುವುದೂ ಲಾಭ. ಯಾವ ಲಾಭ ನಮ್ಮನ್ನು ಎಷ್ಟು ಕಾಪಾಡುತ್ತದೆ? ಸಹಜವಾಗಿಯೇ ಹೇಳುವುದಾದರೆ, ಹೆಚ್ಚು ಲಾಭ, ಹೆಚ್ಚು ಅನೂಕೂಲ. ಹೆಚ್ಚಿನ ಲಾಭದಿಂದ ಹೆಚ್ಚಿನ ಭದ್ರತೆ, ಶಕ್ತಿ,ಆಸಕ್ತಿ, ಸಾಮರ್ಥ್ಯ,ಸಾಹಸ ಪ್ರವೃತ್ತಿ, ಒಲವು, ನಿಲುವು ಇತ್ಯಾದಿ. ಒಂದು ಹಂತದವರೆಗೆ ಶಾಂತಿ, ಸಮಾಧಾನವೂ ಸರಿ, ಮುಂದೆ? ಕೃಷಿ ಲಾಭದಾಯಕವೇ?

ಇವತ್ತು ಲಾಭ–ನಷ್ಟದ ಲೆಕ್ಕಾಚಾರ ನಡೆಯುತ್ತಿರುವುದು ಅರ್ಥಶಾಸ್ತ್ರದ ಚೌಕಟ್ಟಿನೊಳಗೆ. ಅದು ಸರಿಯಾಗಿಯೇ ಇದೆ. ಲಾಭ ಹಣದರೂಪದಲ್ಲಿಯೇ ಬರಬೇಕು ಅಥವಾ ಇರಬೇಕು ಎಂದು ಬಹುತೇಕ ನಿರ್ಧರಿತವಾಗಿದೆ. ಎಲ್ಲೆಲ್ಲಿ ಹಾಕಿದ 'ಹಣ' ಹಿಂತಿರುಗುವುದರೊಂದಿಗೆ ಮೇಲೊಂದಿಷ್ಟು 'ಹಣ' ಬರುತ್ತದೆಯೋ ಅದು ಲಾಭ, ಬರದಿದ್ದರೆ ನಷ್ಟ, ಹಾಕಿದ ಹಣ ಹಿಂದಿರುಗದಿದ್ದರೆ ಅದು ಬರಿ ನಷ್ಟವಲ್ಲ, ಕಡುಕಷ್ಟ. ಇದನ್ನಂತೂ ಒಪ್ಪದೇ ವಿಧಿಯಿಲ್ಲ. ಇಂದಿನ ರೈತ ಕೃಷಿಯಲ್ಲಿ ತನ್ನ ಕೈಯಿಂದ ಹಾಕಿದ ಬಂಡವಾಳವನ್ನು ಹಿಂಪಡೆಯಲು ಸಾಧ್ಯವಾಗದದಿದ್ದರೆ, ಯಾವ ಉಪದೇಶ ಮತ್ತು ಉಪಚಾರದ ಮಾತುಗಳೂ ಅವನನ್ನು ಸಮಾಧಾನ ಪಡಿಸಲಾರವು. ಇನ್ನಿತರ ಬಹುತೇಕ ಉದ್ಯಮಗಳಲ್ಲಿ ಹಾಕಿದ ರೊಕ್ಕ ಹಲವು ಪಟ್ಟು ಹೆಚ್ಚಾಗುತ್ತಿರುವಾಗ ಒಕ್ಕಲುತನದಲ್ಲಿ ಅದು ಸಾಧ್ಯವಾಗದಿದ್ದರೆ ಅವನೇಕೆ ದುಡಿಯಬೇಕು? ಇದು ಸಹಜವಾಗಿಯೇ ಏಳುವ ಪ್ರಶ್ನೆ. ಈಗ ನೀವು ಹೇಳಿ. ಕೃಷಿ ಲಾಭದಾಯಕವೇ?



ಆಧುನಿಕೋತ್ತರ ಬದುಕಿನಲ್ಲಿ ಅರ್ಥಶಾಸ್ತ್ರದ ಪ್ರಭಾವ ಬಹಳಷ್ಟಿದೆ. ಅದು ಕೇವಲ ಹತ್ತು ಹಲವು ಕ್ಷೇತ್ರಗಳಿಗೆ ಸೀಮಿತವಾಗಿರದೆ ಪ್ರತಿಯೊಂದು ಕ್ಷೇತ್ರಕ್ಕೂ ವ್ಯಾಪಿಸಿದೆ. ಆಹಾರ-ವಿಹಾರ, ಉಡುಗೆ-ತೊಡುಗೆ, ಮಾತು-ಕೃತಿ, ಸಾಹಿತ್ಯ-ಕಲೆ, ಭಾಷೆ-ಸಂಸ್ಕೃತಿ ಹೀಗೆ ಪ್ರತಿಯೊಂದು ವಲಯದಲ್ಲೂ ಅದು ಕೈಯಾಡಿಸುತ್ತಿದೆ. ಲಾಭ-ನಷ್ಟದ ಲೆಕ್ಕಾಚಾರಗಳು ಬದುಕಿನ ಪ್ರತಿ ಹೆಜ್ಜೆಯಲ್ಲಿಯೂ ಹೆಚ್ಚುತ್ತಲೇ ಹೋಗುತ್ತಿವೆ. ಇದಕ್ಕೆ ವ್ಯವಸಾಯ ಕ್ಷೇತ್ರಕೂಡ ಹೊರತಾಗಿಲ್ಲ. ಇಂತಹ ಎಲ್ಲ ಲೆಕ್ಕಾಚಾರಗಳಲ್ಲಿ ಲಾಭ ನಷ್ಟದ ಮಾನದಂಡವೆಂದರೆ ಹಣ. ಅರ್ಥಶಾಸ್ತ್ರ ಬಳಸುವ ಏಕೈಕ ಅಳತೆಯೆಂದರೆ ಹಣ. ಅದು ಎಲ್ಲವನ್ನೂ ಹಣಕಾಸಿನ ಪರಿಭಾಷೆ ಯಲ್ಲಿಯೇ ಮಾತನಾಡುವುದರಿಂದ ಕೃಷಿ ಕ್ಷೇತ್ರಕ್ಕೂ ಅದನ್ನು ಯಥಾವತ್ತಾಗಿ ಅನ್ವಯಿಸಿದ್ದರಿಂದ ಒಂದಷ್ಟು ಅಥವಾ ಬಹಳಷ್ಟು ಗೊಂದಲವುಂಟಾಗಿದೆ.

ಹೀಗೆ ಸೈದ್ಧಾಂತಿಕವಾಗಿ ಚರ್ಚಿಸುತ್ತ ಹೋಗುವುದರಿಂದ, ಅಲ್ಲಿ ಹೊಲದಲ್ಲಿ ನಿಂತು ದುಡಿಯುತ್ತಿರುವ ರೈತನಿಗೆ ಹೆಚ್ಚೇನೂ ಲಾಭ ವಾಗುವುದಿಲ್ಲ. ಒಟ್ಟೂ ಕೃಷಿ ಕ್ಷೇತ್ರದಲ್ಲಿ ತೊಡಗಿಸಿ ಕೊಂಡಿರುವ ಪಾಲುದಾರರು ಇದನ್ನು ರೈತನಿಗೆ ಕಾಲಕ್ರಮೇಣ ತಿಳಿಸುತ್ತ ಹೋಗಬೇಕು. ಮತ್ತು ಬಹಳ ಮುಖ್ಯವಾದದ್ದೆಂದರೆ ಅವನೇನು ಹೇಳುತ್ತಾನೆ ಎಂಬುದನ್ನು ಕೇಳಿಸಿಕೊಳ್ಳಬೇಕು.

### ಎರಡು ಮೂರು ಸನ್ನಿವೇಶಗಳನ್ನು ನೋಡೋಣ

ನನ್ನ ಇಲಾಖೆಯ ದೀರ್ಘಾವಧಿ ಸೇವೆಯನ್ನು 'ರಾಜ್ಯ ಮಣ್ಣು ಸಮೀಕ್ಷೆ' ಎನ್ನುವ ತಾಂತ್ರಿಕ ವಿಭಾಗದಲ್ಲಿ ಸಲ್ಲಿಸಿದೆ. ಅತ್ಯಂತ ಶಾಸ್ತ್ರೀಯವಾಗಿ, ಅಷ್ಟೇ ವೈಜ್ಞಾನಿಕವಾಗಿ ನಿರ್ವಹಿಸಬೇಕಾಗಿದ್ದ ಕೆಲಸವದು. ಅಂದ ಮೇಲೆ ಅದು ರೈತರಿಗೆ ಪರಕೀಯವೆನಿಸುವ ಹಾಗೂ ಮುಖ್ಯವಾಹಿನಿಯಿಂದ ದೂರವಿರುವ ವಿಭಾಗ. ಆಗ ನಾನು ಕೃಷಿ ಕುರಿತಾಗಿ ನನ್ನದೇ ಆದ ಚಿಂತನೆಗಳನ್ನು ನಡೆಸುವುದು, ಅಲ್ಲಲ್ಲಿ ಉಪನ್ಯಾಸ ನೀಡುವುದು, ವಿಶೇಷವಾಗಿ ಮಣ್ಣನ್ನು ಮನಸ್ಸಿನಲ್ಲಿ ಆಹ್ವಾಹಿಸಿಕೊಂಡು ಕಥೆ-ಕವಿತೆ ಬರೆಯುವುದು ಮಾಡುತ್ತಿದ್ದೆ. ಆದರೆ ರೈತ ಸಮುದಾಯದ ಬವಣೆ ಪೂರ್ಣ ಪ್ರಮಾಣದಲ್ಲಿ ನನ್ನ ಗಮನಕ್ಕೆ ಬಂದಿತ್ತೆಂದು ಹೇಳಲಾರೆ. ಮುಂದೆ ಧಾರವಾಡ ಜಿಲ್ಲೆಯ ಕಲಘಟಗಿಗೆ ವರ್ಗವಾಗಿ ಕ್ಷೇತ್ರ ಮಟ್ಟದಲ್ಲಿ ಕೆಲಸ ಮಾಡಲು ಪ್ರಾರಂಭಿಸಿದೆ. ಒಂದು ರೀತಿಯಲ್ಲಿ ಇದು ಪ್ರೇಕ್ಷಕರ ಗ್ಯಾಲರಿಯಿಂದ ನೇರವಾಗಿ ಆಟದ ಮೈದಾನಕ್ಕೆ ಇಳಿದಂತೆ. ಕೃಷಿ ಕ್ಷೇತ್ರದ ಹತ್ತಾರು ವಾಸ್ತವಿಕ ಸಂಗತಿಗಳು ನನ್ನ ಗಮನಕ್ಕೆ ಬಂದವು. ನನ್ನ ಮಾತು-ಕತೆ, ಭಾಷಣ, ಲೇಖನ, ವಗೈರೆ ಸ್ವಲ್ಪಮಟ್ಟಿಗೆ ಕಡಿಮೆಯಾದವು. ಅಲ್ಲಿನ ಮಲೆನಾಡ ಪರಿಸರ, ಮಣ್ಣು ಮತ್ತು ಇತರೆ ಸಂಪನ್ಮೂಲಗಳು, ಮಳೆ ಪ್ರಮಾಣ ಹಾಗೂ ಹಂಚಿಕೆಯ ಅನುಸಾರ ರೈತರ ಜೀವನಮಟ್ಟ ತಕ್ಕಮಟ್ಟಿನದಾಗಿತ್ತು.

ಅಸಂಖ್ಯ ರೈತ ಕುಟುಂಬಗಳು ವರ್ಷಪೂರ್ತಿ ಒಂದಿಲ್ಲೊಂದು ಚಟುವಟಿಕೆಯಲ್ಲಿ ತೊಡಗಿಸಿ ಕೊಂಡಿದ್ದವು. ಅಲ್ಲಲ್ಲಿ ಕೊಳವೆ ಬಾವಿಗಳಿರುವುದರಿಂದ ನಿಶ್ಚಿತ ನೀರಿನ ಮೂಲಗಳನ್ನು ಬಳಸಿ ವರ್ಷದಲ್ಲಿ 2-3 ಬೆಳೆ ಬೆಳೆಯುತ್ತಿದ್ದರು. ದೀರ್ಘಾವಧಿ ತೋಟಗಾರಿಕೆ ಬೆಳೆಗಳು ಇದ್ದವು. ಆದರೂ ರೈತರು ಸುಧಾರಿಸಿ ಕೊಳ್ಳಬೇಕಾದ ಅಂಶಗಳು ಬೇಕಾದಷ್ಟಿವೆ ಎಂಬುದು ನನ್ನ ಗಮನಕ್ಕೆ ಬಂತು. ಆದ್ದರಿಂದ ಇಲಾಖೆಯ ಕೆಲಸ ಕಾರ್ಯದೊಂದಿಗೆ ಇನ್ನಿತರ ಕೆಲವು ಚಟುವಟಿಕೆ ಗಳನ್ನು ಕೈಗೊಳ್ಳಲು ಮುಂದಾದೆ. ಅವು ಒಂದಿಷ್ಟು ಸಫಲತೆ ಮತ್ತು ವಿಫಲತೆಗಳೆರಡನ್ನೂ ಕಂಡವು. ಮುಂದೆ ನಾಲ್ಕು ವರ್ಷ ನರಗುಂದ ತಾಲೂಕಿನಲ್ಲಿ ಕೆಲಸ ನಿರ್ವಹಿಸಬೇಕಾಯಿತು. ಕಾಲುವೆ ನೀರಾವರಿಯ ಸೌಲಭ್ಯವಿರುವ ಆ ಪ್ರದೇಶದಲ್ಲಿ ಬಹುತೇಕ ವಾಣಿಜ್ಯ ಕೃಷಿಯನ್ನು ಮಾಡಲಾಗುತ್ತಿದೆ. ಒಂದಷ್ಟು ಹುಮ್ಮಸ್ಸಿನಿಂದ ಕೆಲಸಕ್ಕೆ ತೊಡಗಿಕೊಂಡು ರೈತರಿಂದ ಉತ್ತಮ ಸ್ಪಂದನೆದೊರೆಯಿತು. ನನ್ನ ಸಲಹೆಗಳನ್ನು ಕೆಲವು ರೈತರಾದರೂ ಅಳವಡಿಸಿಕೊಂಡು ನನ್ನ ಆತ್ಮವಿಶ್ವಾಸ ವನ್ನು ಹೆಚ್ಚಿಸಿದರು. ಒಂದು ವರ್ಷ ಮುಂಗಾರಿನಲ್ಲಿ ಮಳೆಯಾಗದೇ ಹೆಸರು ಬಿತ್ತನೆಯಾಗಲಿಲ್ಲ. ಹಿಂಗಾರಿನಲ್ಲಿ ಕಾಲುವೆ ನೀರು ಹರಿಸಿ ವ್ಯಾಪಕವಾಗಿ ಬೆಳೆದಗೋಂಜಾಳದ ಉತ್ಪನ್ನಕ್ಕೆ ಮಾರುಕಟ್ಟೆಯಲ್ಲಿ ಸೂಕ್ತ ಬೆಲೆ ಸಿಗಲಿಲ್ಲ. ಮತ್ತೊಂದು ಹಂಗಾಮಿನಲ್ಲಿ ಭರ್ಜರಿ ಬೆಳೆದು ನಿಂತಿದ್ದ ಕಡಲೆತುಕ್ಕು (ಭಂಡಾರ) ರೋಗಕ್ಕೆ ತುತ್ತಾಗಿ, ಫಸಲು ಕೀಳಲು ಕೂಡ ಆಳು ಮುಂದೆ ಬರಲಿಲ್ಲ. ಇನ್ನೊಂದು ಸಲ ಚೆನ್ನಾಗಿಕಾಣುತ್ತಿದ್ದ ಹತ್ತಿ ಬೆಳೆಯಲ್ಲಿ ಅದೇಕೊ ಎಂದಿನಂತೆ ಕಾಯಿ ಒಡೆದು ಅರಳಿ ಹೊಂಡಲಿಲ್ಲ. ಒಮ್ಮೆಯಂತೂ ನೆರೆಹಾವಳಿ ಬಂದು ನದಿ ಮತ್ತು ಹಳ್ಳದ ದಂಡೆಯ ಗುಂಟ ಇದ್ದ ಬೆಳೆಗಳ ತೋಟಗಳೇ ನಾಶವಾಗಿ ಹೋದವು. ನನ್ನ ಬಾಯಿ ಸಂಪೂರ್ಣ ಬಂದಾಗಿ ಭಾಷಣ-ಲೇಖನಗಳು ನಿಂತವು. ಅದಕ್ಕಾಗಿ ಸಮಯವೂ ಸಿಗುತ್ತಿರಲಿಲ್ಲವೆನ್ನಿ. ನಿಜವಾಗಿಯೂ ನನಗೆ ಭ್ರಮನಿರಶನ ವಾಗಿತ್ತು. ಇಂದಿಗೂ ನಾನು ಯೋಚಿಸುವುದೇನೆಂದರೆ ನನಗೇ ಅಷ್ಟು ನೋವಾಯಿತೆಂದರೆ ರೈತರ ಸ್ಥಿತಿ ಏನಾಗಿರಬೇಡ? ಹಾಗಾದರೆ ಕೃಷಿ ಬಿಡಬೇಕೆ, ಮುಂದುವರೆಸಬೇಕೆ? ಮುಂದುವರೆಸಬೇಕೆಂದರೆ, ಮತ್ತೆ ಎದುರಾಗುವ ಪ್ರಶ್ನೆ, ಕೃಷಿ ಲಾಭದಾಯಕವೇ?

ಇಲ್ಲಿ ನಾನು ಕೂಡ ಹಣವನ್ನೇ ಮಾನದಂಡ

ವಾಗಿಟ್ಟುಕೊಂಡ ಅರ್ಥಶಾಸ್ತ್ರದ ಮಾರ್ಗವನ್ನೇ ಅನುಸರಿಸಬಹುದು. ಆದ್ದರಿಂದಲೇ ನನಗೆ ಒಂದಷ್ಟು ಆಸೆ ಹುಟ್ಟಿಕೊಂಡಿತ್ತು. ಆಸೆ ಇದ್ದಲ್ಲಿ ನಿರಾಸೆಯಾಗುವುದು ಸಹಜ. ಇಲ್ಲಿ ಹೇಳಿದ ನನ್ನ ಅನುಭವ ಅದೊಂದು ಸಾಮಾನ್ಯೀಕರಿಸಿದ ಸನ್ನಿವೇಶ. ಬಹುತೇಕ ಸಂದರ್ಭದಲ್ಲಿ ಕೃಷಿಕುರಿತಾಗಿ ಮಾತನಾಡುವಾಗ ಇದೇ ಕ್ರಮ ಅನುಸರಿಸುತ್ತೇವೆ. ಅದೇ ತಾಲ್ಲೂಕಿನ, ಕೆಲವು ಗ್ರಾಮಗಳಲ್ಲಿ ಹಲವು ರೈತರು ತಕ್ಕಮಟ್ಟಿಗೆ ಲಾಭವನ್ನು ಮಾಡಿಕೊಂಡಿದ್ದಾರೆ. ಆದರೆ ಅಂತವರ ಸಂಖ್ಯೆ ಬೆರಳೆಣಿಕೆಯಷ್ಟು ಇರುತ್ತದೆನ್ನುವುದು ಮತ್ತೊಂದು ರೀತಿಯ ವಾಸ್ತವ. ಅಲ್ಲದೆ ಅಂತಹ ರೈತರು ಅಲ್ಲಲ್ಲಿ ಚದುರಿ ಹೋಗಿರುತ್ತಾರೆ. ಅತ್ಯಂತ ಯಶಸ್ವಿಯಾಗಿ ವ್ಯವಸಾಯ ಮಾಡಿದ ರೈತನ ಜಮೀನಿನ ಎಡಬಲ ಅಂತಹುದೇ ಮಾದರಿಗಳು ನೋಡಲು ಸಿಗುವುದಿಲ್ಲ. ವಿಶಾಲವಾದ ಪ್ರದೇಶದ ಮೇಲೆ ನೀವು ಹಕ್ಕಿಯಂತೆ ಹಾರುತ್ತಿದ್ದೀರಿ ಎಂದು ಕಲ್ಪಿಸಿಕೊಳ್ಳಿ. ಭೂಮಿಯ ಕಡೆಗೆ ನೀವು ನೋಡಿದರೆ ವಿಸ್ತಾರವಾದ ನೆಲದಲ್ಲಿ ಅಲ್ಲೊಂದು, ಇಲ್ಲೊಂದು ಹಸಿರು ತುಣುಕುಗಳು ಬಿದ್ದಂತೆ ಕಾಣುತ್ತವೆ. ಬಹುಶಃ ಆಕಾಶದ ಎತ್ತರದಲ್ಲಿ ಹಾರಾಡುವ ಪಕ್ಷಿಗಳಿಗೂ ಹೀಗೆಯೇ ಕಾಣಬಹುದು. ಅವು ಅಂತ ಜಾಗೆಗೆ ಇಳಿದು ಬಂದು ಕೆಲಕಾಲ ತಂಗಬಹುದು, ಆಶ್ರಯ ಪಡೆಯಬಹುದು, ಗೂಡು ಕಟ್ಟಬಹುದು, ಬದುಕು ಕಟ್ಟಿಕೊಳ್ಳಬಹುದು. ಅಲ್ಲಿರುವ ರೈತ ಅದಾಗಲೇ ಬದುಕು ಕಟ್ಟಿಕೊಂಡಿರುತ್ತಾನೆ. ಆ ತುಂಡು ಭೂಮಿಯೇ ಯೋಜನೆ, ಕಾರ್ಯಕ್ರಮ, ಸಂಶೋಧನೆ, ಪ್ರಯೋಗಾಲಯ, ಕಾರ್ಯಗಾರ, ಒಟ್ಟು ಸಾಗುವಳಿ ಕ್ರಮ. ಅದೇ ಮಾದರಿ ಕೃಷಿ. ಅವನದೇ ಅಥವಾ ಅವಳದೇ ಆದ ಮಾದರಿ ಕೃಷಿ. ಅಲ್ಲಿಯಾವುದೇ ಸಮಸ್ಯೆ, ಲೋಪ–ದೋಷ, ಕಷ್ಟ–ನಷ್ಟ ಇಲ್ಲವೆಂದಾಯಿತೆ? ಖಂಡಿತ ತಪ್ಪು. ಅಲ್ಲಿಎಲ್ಲ ಅಡೆತಡೆಗಳೂ ಇವೆ. ಆದರೆ ಅವನ್ನು ಸರಿಪಡಿಸುವ ಪರಿಸರ ವ್ಯವಸ್ಥೆಯೊಂದು ನಿರ್ಮಾಣವಾಗಿದೆ. ಅದು ಕಾಲ ಕ್ರಮೇಣ ತನ್ನಲ್ಲಿರುವ ಅಡಚಣೆಗಳನ್ನು ನಿವಾರಿಸಿಕೊಳ್ಳುತ್ತ ಹೋಗುತ್ತದೆ. ಸಂಭವಿಸ ಬಹುದಾದ ನಷ್ಟಗಳನ್ನು ತಗ್ಗಿಸುವ ಮಾರ್ಗೋಪಾಯಗಳನ್ನು ಅದೇ ಕೃಷಿ ಪರಿಸರ ರೈತನಿಗೆ ಕಲಿಸಿಕೊಡುತ್ತದೆ. ಇಂತಹ ಪಾಠಗಳನ್ನು ನನಗೆ ಕಲಿಸಿಕೊಟ್ಟವರು ಅದೇ ರೈತರು. ಅವರು ಮಾಡಿ ತೋರಿಸಿದ್ದನ್ನು ನಾನು ಹೇಳಿ ತೋರಿಸುತ್ತಿದ್ದೇನೆ ಅಷ್ಟೆ. ನನಗೆ ಯಾವ ಕೃಷಿ ಅನುಭವವಿದೆ? ಈಗ ಯಾರಾದರೂ ಪ್ರಶ್ನಿಸಬಹುದು, ಕೃಷಿ ಲಾಭದಾಯಕವೇ?



ಕೃಷಿ ಕುರಿತಾದ ಸಮಸ್ಯೆಗಳಿರುವುದು ಕೃಷಿಯಲ್ಲಿ ಅನ್ನುವುದಕ್ಕಿಂತ, ಕೃಷಿಕ್ಷೇತ್ರದ ಹೊರಗಿವೆ. ಹೊರಗಿನ ಸಮಸ್ಯೆಗಳ ಕಾರಣಕ್ಕಾಗಿಇವತ್ತುಒಕ್ಕಲುತನ ಎಂಬ ಜೀವನೋಪಾಯದದಾರಿಯಲ್ಲಿಕಲ್ಲು, ಮುಳ್ಳು, ತಗ್ಗು, ದಿನ್ನೆಗಳು ಸೃಷ್ಟಿಯಾಗಿವೆ.

ಯಾವುದೋ ಯೋಜನೆ, ಪ್ರಾಜೆಕ್ಟ್ ನಿರ್ಮಾಣಕ್ಕಾಗಿ ರೈತರ ಜಮೀನುಗಳನ್ನು ವಶಪಡಿಸಿ ಕೊಳ್ಳಲಾಗುತ್ತದೆ. ಅನೇಕ ಸಂದರ್ಭದಲ್ಲಿ ಆಯಾ ಯೋಜನೆಗಳಿಗೂ ಕೃಷಿಗೂ ಸಂಬಂಧವೇ ಇರುವುದಿಲ್ಲ. ಉದಾಹರಣೆಗೆ ಹೆದ್ದಾರಿ ನಿರ್ಮಾಣ ಅಥವಾ ಅಗಲೀಕರಣ. ಬೇರೆಬೇರೆ ವೃತ್ತಿಪರರು ತಮ್ಮ ಬಿಡುವಿನ ವೇಳೆಯ ವಿಹಾರಾರ್ಥಕ್ಕಾಗಿ ಒಂದು ಫಾರ್ಮನ್ನು ಮಾಡಬೇಕೆಂದು ಜಮೀನನ್ನು ಖರೀದಿಸುತ್ತಾರೆ. ಸಾಂಪ್ರದಾಯಿಕವಾಗಿ ಕೃಷಿಯನ್ನೇ ನೆಚ್ಚಿಕೊಂಡಿದ್ದ ರೈತನ ಜಮೀನಿಗೆ ಹೆಚ್ಚಿನ ಬೆಲೆಯ ಆಮಿಷ ತೋರಿಸಿ ವ್ಯವಹಾರ ಕುದುರಿಸ ಲಾಗುತ್ತದೆಯೆಂದು ಯಾರಿಗೂ ತಿಳಿಸಿ ಹೇಳಬೇಕಾಗಿಲ್ಲ. ಖಾಸಗಿ ಕಂಪನಿಗಳು, ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಗ್ರಾಹಕ ಉತ್ಪನ್ನಗಳ ತಯಾರಿಕೆಗೆ ಬೇಕಾದ ಕಚ್ಚಾ ಸಾಮಗ್ರಿಗಳನ್ನು ಪಡೆದುಕೊಳ್ಳಲು ಹೆಚ್ಚು ಹೆಚ್ಚು ವಿಸ್ತೀರ್ಣದಲ್ಲಿ ಏಕರೂಪ ಬೆಳೆ ಪದ್ಧತಿಯನ್ನು ಹೇರುತ್ತವೆ, ಫ್ಯಾಕ್ಟರಿ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಕುಸಿದರೆ ಯಾವುದೇ ಮುಜುಗರವಿಲ್ಲದೇ ಕಂಪನಿಗಳು ತಮ್ಮ ನಿರ್ಧಾರವನ್ನು ಬದಲಿಸಿ ಕೃಷಿ ಹುಟ್ಟುವಳಿಗಳ ಖರೀದಿಗೆ ನಿರಾಕರಿಸುತ್ತವೆ. ಪರಿಕರ, ಉಪಕರಣ, ಸುಧಾರಿತ ಯಂತ್ರಗಳನ್ನು ಕೋಟ್ಯಂತರ ಬಂಡವಾಳ ಹೂಡಿ ಉತ್ಪಾದಿಸುತ್ತವೆ. ಅಂತಹ ಕಂಪನಿಗಳು ಯಾವಾಗಲೂ ಅವನ್ನು ವಿಲೇವಾರಿ ಮಾಡುವ ಹವಣಿಕೆಯಲ್ಲಿರುತ್ತವೆ.

ಬೇರೆ ಕ್ಷೇತ್ರದವರ ದೋಷ ಪೂರಿತ ನಡೆ–ನುಡಿಗಳಿಂದ ಕೃಷಿಕರು ದಿಕ್ಕು ತಪ್ಪುತ್ತಲೇ ಬಂದಿದ್ದಾರೆ. ಯಾವಾಗಲೂ ಅವರ ಏಳಿಗೆ ಕುರಿತಾಗಿ ಮಾತನಾಡುವ ಸರಕಾರ ಮತ್ತು ಸರಕಾರೇತರ ಸಂಘ ಸಂಸ್ಥೆಗಳು ಹಾಗೂ ಮಾಧ್ಯಮಗಳು ದೂರದೃಷ್ಟಿಯ ಕೊರತೆಯನ್ನು ಅನುಭವಿಸುತ್ತಿವೆ. ತತ್ಪರಿಣಾಮವಾಗಿ ಅವುಗಳ ಕಾರ್ಯವೈಖರಿಯಲ್ಲಿ ಅದೇ ಬದ್ಧತೆ ಕಾಣುತ್ತಿಲ್ಲ. ಜಮೀನೆಷ್ಟಿದೆ, ಎತ್ತು ಗಳೆಷ್ಟಿವೆ ಎಂಬುದನ್ನಾಧರಿಸಿ ಕೆಲವು ದಶಕಗಳ ಹಿಂದೆ ರೈತಕುಟುಂಬಕ್ಕೆ ಪ್ರಾಪ್ತವಾಗುತ್ತಿದ್ದ ಗೌರವವನ್ನು ನೀಡಲು ಸಮಕಾಲೀನ ಸಮಾಜ ತಯಾರಿಲ್ಲ. ಎಲ್ಲೂ ಸಲ್ಲದವನು ಎತ್ತಿನ ಬಾಲ ತಿರುವಲು ಹೋಗುತ್ತಾನೆ ಎಂಬ ಉಡಾಫೆಯ ಮಾತುಗಳು ಕೇಳಿ ಬರುತ್ತವೆ. ಹಾಗೆಂದುಕೊಳ್ಳುವವರಲ್ಲಿ ರೈತರೂ ಇದ್ದಾರೆ.

ಹೀಗೆ ಇಲ್ಲಿ ಪಟ್ಟಿ ಮಾಡಿದ ಸವಾಲು–ಸಂಗತಿಗಳೊಂದಿಗೆ ಇನ್ನೂ ಹಲವಾರು ವಿಷಯಗಳನ್ನು ಸೇರಿಸಬಹುದು. ಗಮನಿಸಬೇಕಾದ ಸಂಗತಿಯೇನೆಂದರೆ, ಇಲ್ಲಿರುವ ಬಹುತೇಕ ಸಮಸ್ಯೆಗಳು ಕೃಷಿಯೇತರ ವಲಯಗಳಿಂದ ಸೃಷ್ಟಿಯಾಗಿ, ಕೃಷಿ ಕ್ಷೇತ್ರದ ಮೇಲೆ ಹೇರಲ್ಪಟ್ಟವು. ಯಾರದೋ ಸಮಸ್ಯೆ, ಯಾವುದೋ ವಲಯದ ಆಸೆ ಬುರುಕತನಕ್ಕೆ ಒಕ್ಕಲುತನವೊಂದು ಆಟದ ಮೈದಾನವಾಗಿ ಪರಿಣಮಿಸಿರುವ ಪರಿ. ಕಾರ್ಖಾನೆಯ ಉತ್ಪನ್ನವಷ್ಟೇ ಅಲ್ಲ, ಬಿಸಾಕಲು ಜಾಗವಿಲ್ಲದ ತ್ಯಾಜ್ಯಗಳಿಗೆ ಕೂಡ ರೈತನ ಹೊಲವೊಂದು ಕಸದಬುಟ್ಟಿಯಾಗಿದೆ.

ಆದರೆ ಎಲ್ಲ ಸಂದರ್ಭದಲ್ಲೂ ನಾವು ಹೀಗೆ ಮಾತನಾಡುವುದು ಪ್ರತಿಗಾಮಿತನವಾಗುತ್ತದೆ. ಆಧುನಿಕ ಸಂಶೋಧನೆ, ಸೌಕರ್ಯಗಳಿಂದ ಅನೇಕ ಕೃಷಿ ಕಾರ್ಯಗಳು ಸುಲಭ ಮತ್ತು ಸುಲಲಿಗ್ಗಿ ರೀತಿಯಲ್ಲಿ ನಡೆಯಲು ಅನುಕೂಲವಾಗಿದೆ. ಕೃಷಿ ಬದುಕಿನ ಕ್ಲಿಷ್ಟತೆ ಅಥವಾ ಅಸಹನೀಯತೆಯನ್ನು ತಗ್ಗಿಸುವ ತಂತ್ರಜ್ಞಾನ ಯಾವ ಮೂಲದಿಂದಲಾದರೂ ಬಂದಿರಲಿ, ಅದನ್ನು ನಾವು ಸ್ವೀಕರಿಸಬೇಕಾಗುತ್ತದೆ. ಅದು ಯೋಗ್ಯ ಬೆಲೆಯಲ್ಲಿ ಮತ್ತು ಸೂಕ್ತ ರೀತಿಯಲ್ಲಿ ಲಭ್ಯವಾಗಬೇಕು. ಅಲ್ಲದೆ ಬಳಕೆಗೆ ಸುರಕ್ಷಿತವಾಗಿರಬೇಕು. ಕೃಷಿ ಅರ್ಥಶಾಸ್ತ್ರವನ್ನು ಹೀಗೆ ಅರ್ಥೈಸಿಕೊಳ್ಳಬೇಕು; ಇಂತಹ ಸಂಗತಿಗಳ ಕುರಿತಾಗಿ ಅದು ಮಾತನಾಡಬೇಕು; ರೈತನ ಕೌಟುಂಬಿಕ, ಸಾಮಾಜಿಕ ಆಯಾಮಗಳನ್ನು ಕೀಲಿಸಿಕೊಂಡು ಚಿಂತಿಸಬೇಕು; ಪರಂಪರಾಗತವಾಗಿ ಒದಗಿ ಬಂದಿರುವ ಜಮೀನಿನೊಂದಿಗಿನ ಅವನ ಭಾವನಾತ್ಮಕ ಸಂಬಂಧವನ್ನು ಗೌರವಿಸಬೇಕು; ಯಾವಾಗಲೂ ಲಾಭನಷ್ಟದ ಲೆಕ್ಕಾಚಾರ ಮಾಡದೇ ಅವನ ಕುಟುಂಬದ ಆರೋಗ್ಯ, ಹಿತ, ತೃಪ್ತಿ ಎಷ್ಟು ಮುಖ್ಯ ವೆಂಬುದನ್ನು ಗಮನಿಸಬೇಕು; ಒಟ್ಟು ಆದಾಯದಲ್ಲಿ ಒಟ್ಟು ಖರ್ಚನ್ನು ಕಳೆದು ಉಳಿಯುವುದಷ್ಟೇ ಲಾಭವಲ್ಲ ಎಂಬುದನ್ನು ತಿಳಿಯಬೇಕು; ಪರಿಸರ ವ್ಯವಸ್ಥೆಯ ಭಾಗವಾಗಿರುವ ಕೃಷಿಯ ಯಶಸ್ಸನ್ನು ಅಳೆಯಲು ಹಣವೊಂದೇ ಮಾನದಂಡವಲ್ಲ ಎಂಬುದನ್ನು ಪ್ರಸ್ತಾಪಿಸಬೇಕು; ಇದೂ ಕೂಡ ಅರ್ಥಶಾಸ್ತ್ರ ಅಧ್ಯಯನದ ಉದ್ದೇಶವಾಗಬೇಕು. ಚರ್ಚೆ ಮುಂದುವರೆಯಬೇಕಾದ ವಿಷಯವೆಂದರೆ, ಕೃಷಿ ಲಾಭದಾಯಕವೇ?

***





# "ವಚನ ದರ್ಶನ: ಭಕ್ತಿ–ಕಾಯಕ–ದಾಸೋಹ"



**ಡಾ. ಸಂತೋಷ್ ಕುಮಾರ್ ಪಿ. ಕೆ.**
ಐ.ಕ್ಯೂ.ಎ.ಸಿ. ಹಾಗೂ
ಬಿ.ಎ. ಕಾರ್ಯಕ್ರಮದ ಸಂಯೋಜಕರು
ಕ.ರಾ.ಗ್ರಾ. ಮತ್ತು ಪಂ. ರಾಜ್
ವಿಶ್ವವಿದ್ಯಾಲಯ, ಗದಗ

ಭಾರತವು ಆಧ್ಯಾತ್ಮದ ತವರೂರಾಗಿದೆ. ಆಧ್ಯಾತ್ಮ ಎನ್ನುವುದು 'ಸ್ವ'ದ ಅರಿವು ಅಥವಾ ಆತ್ಮದ ಜ್ಞಾನಕ್ಕೆ ಸಂಬಂಧಿಸಿದ ವಿಷಯವಾಗಿದೆ. ಅದನ್ನು ಅತ್ಯಂತಿಕ ಸತ್ಯದದರ್ಶನ ಎಂದೂ ಸಹ ಕರೆಯಬಹುದು. ಆಧ್ಯಾತ್ಮದ ಈ ಸತ್ಯಾನ್ವೇಷಣೆಯ ಕಾರ್ಯವೂ ಭಾರತದಲ್ಲಿ ಎಂದಿಗೂ ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ವೇದಗಳ ಕಾಲದಿಂದ ಹಿಡಿದು ಆಧುನಿಕ ಸಂತರು ವಿವಿಧ ಮಾರ್ಗಗಳ ಮೂಲಕ ಆತ್ಮದ ಸತ್ಯವನ್ನು ಹುಡುಕಿ ಅನುಭವಿಗಳಾಗಿರುವುದಕ್ಕೆ ನಿದರ್ಶಗಳಿವೆ. ವೇದೋಪನಿಷತ್ತುಗಳ ಪರಂಪರೆ ಭಕ್ತಿ ಪರಂಪರೆ, ದಾಸ ಪರಂಪರೆ, ಬೌದ್ಧ, ಜೈನ, ಇತ್ಯಾದಿ ಪಂಥಗಳು ಆ ಅತ್ಯಂತಿಕ ಸತ್ಯಕ್ಕೆ ತೆರಳುವ ಮಾರ್ಗದ ಕುರಿತು ಸುಧೀರ್ಘವಾದ ಸಂಶೋಧನೆಯನ್ನು ನಡೆಸಿವೆ ಹಾಗೂ ಅವುಗಳನ್ನು ಸಾಧ್ಯವಾದ ಮಟ್ಟಿಗೆ ಜನಸಾಮಾನ್ಯರಿಗೂ ತಲುಪಿಸಿವೆ. ಆಧ್ಯಾತ್ಮವು ಆನಂದದ ಮಾರ್ಗವಾಗಿದ್ದು, ಭವಬಂಧನದಿಂದ ಮುಕ್ತಿಗೊಳ್ಳುವ ಒಂದು ಪ್ರಕ್ರಿಯೆಯಾಗಿದೆ. ಇದನ್ನೇ ಉಪನಿಷತ್ತುಗಳು ಹಾಗೂ ಇತರೆ ಸಂತರು ಕಾಲದಿಂದ ಕಾಲಕ್ಕೆ ಹೇಳುತ್ತಾ ಬಂದಿದ್ದಾರೆ. ಈ ನಿಟ್ಟಿನಲ್ಲಿ ವಚನ ಸಾಹಿತ್ಯವು 11ರಿಂದ 15ನೇ ಶತಮಾನದಲ್ಲಿ ಆಧ್ಯಾತ್ಮದ ಕೃಷಿಯನ್ನು ಮಾಡಿ ಶಿವ ಶರಣ ಶರಣೆಯ ಸತ್ಯಾನ್ವೇಷಣೆಯ ಪಯಣಗಳನ್ನು ಸರಳ ಭಾಷೆಯನ್ನು ನಿದರ್ಶಿಸುತ್ತದೆ. ಕನ್ನಡ ಸಾರಸ್ವತ ಲೋಕದಲ್ಲಿ ವಚನ ಸಾಹಿತ್ಯ ಮತ್ತು ಶಿವಶರಣರ ಕುರಿತು ಆಗಿರುವಷ್ಟು ವಾದ ವಾಗ್ವಾದಗಳು ಇನ್ಯಾವ ಭಕ್ತಿ ಪರಂಪರೆಯ ಮೇಲೂ ಆದಂತೆ ಕಾಣುವುದಿಲ್ಲ. ಏಕೆಂದರೆ ವಚನಗಳು ಬದುಕಿನ ಎಲ್ಲಾ ಮಗ್ಗಲುಗಳನ್ನು ಮುಟ್ಟುವ ಸಂದರ್ಭದಲ್ಲಿ 'ಸಾಮಾಜಿಕ'ವಾಗಿರುವ ಅಂಶಗಳ ಕುರಿತು ಮಾತನಾಡುವುದರಿಂದ ಪ್ರಸ್ತುತದ ಅಗತ್ಯತೆಗಳಿಗೆ ಅವುಗಳನ್ನು ಒಗ್ಗಿಸುವ ಪ್ರಯತ್ನ ಎಗ್ಗಿಲ್ಲದೇ ಸಾಗಿದೆ. ಆದ್ದರಿಂದ ವಚನ ಸಾಹಿತ್ಯಗಳನ್ನು ನಮ್ಮ ಪ್ರಸ್ತುತ ಅಗತ್ಯತೆಗಳಿಗೆ ಹೊಂದಿಸಿಕೊಂಡು ನೋಡಬೇಕೋ ಅಥವಾ ಅವುಗಳು ಇದ್ದ ಹಾಗೆಯೇ ಗ್ರಹಿಸಬೇಕೋ ಎನ್ನುವ ಗೊಂದಲ ನಮ್ಮ ಮುಂದೆ ಬರುತ್ತದೆ. ಆದಾಗ್ಯೂ ವಚನ ಪರಂಪರೆಗಳನ್ನು ಅರ್ಥೈಸಿಕೊಳ್ಳಲು ನಮಗಿರುವ ಏಕೈಕ ಮೂಲವೆಂದರೆ ಅದು ವಚನಗಳೇ ಆಗಿವೆ.

ಆಧುನಿಕ ಕಾಲಘಟ್ಟದಲ್ಲಿ ವಚನಗಳನ್ನು ಸಮಗ್ರವಾಗಿ ಸಂಗ್ರಹಿಸುವ ಕಾರ್ಯ ಫ. ಗು. ಹಳಕಟ್ಟಿಯವರಿಂದ ಪ್ರಾರಂಭವಾಯಿತು ಎಂದರೆ ತಪ್ಪಾಗಲಾರದು. ಹಲವಾರು ಸಂಪುಟಗಳಲ್ಲಿ ಸಂಗ್ರಹಿರುವ ವಚನ ಸಾಹಿತ್ಯವು ಮುಂದೆ ಕರ್ನಾಟಕ ಸರ್ಕಾರವು ವಚನ ಸಂಪುಟಗಳನ್ನು ಕ್ರೋಡೀಕರಿಸಲು ಅನುವು ಮಾಡಿಕೊಟ್ಟಿತು. ಇದಲ್ಲದೇ ವಚನ ಸಾಹಿತ್ಯದ ಕುರಿತು



ವಿಶ್ವವಿದ್ಯಾಲಯಗಳಲ್ಲಿ ಹಲವಾರು ಸಂಶೋಧನೆಗಳೂ ಸಹ ನಡೆದಿವೆ ಹಾಗೂ ನಡೆಯುತ್ತಿವೆ. ವಚನಗಳ ಕುರಿತು ನೈಜ ದರ್ಶನವಾಗಬೇಕಾದರೆ ಮೂಲದಲ್ಲಿರುವ ವಚನಗಳನ್ನೇ ಓದಿ ಅರ್ಥೈಸಿಕೊಳ್ಳಬೇಕು ಇಲ್ಲದಿದ್ದರೆ ಅವುಗಳ ಕುರಿತು ಸಂಶೋಧನೆ ನಡೆಸಿರುವ ಮತ್ತು ನಡೆಸುತ್ತಿರುವ ಇತ್ಯಾದಿಯವರಿಂದ ಕೇಳಿಸಿಕೊಳ್ಳಬೇಕು.

ವಚನ ಸಾಹಿತ್ಯವು ಭಕ್ತಿ, ಕಾಯಕ ಮತ್ತು ದಾಸೋಹಗಳನ್ನು ಒತ್ತಿ ಹೇಳುತ್ತವೆ. ಈ ಮೂರು ಸಂಗತಿಗಳು ಶಿವ ಸಾಯುಜ್ಯಕ್ಕೆ ಮಾರ್ಗಗಳಾಗಿವೆ. ಭಕ್ತಿಯು ಆಧ್ಯಾತ್ಮದ ಒಂದು ಮಾರ್ಗವಾಗಿದೆ. ವಚನ ಸಾಹಿತ್ಯವು ಪ್ರಧಾನವಾಗಿ ಭಕ್ತಿ ಮಾರ್ಗವನ್ನು ಅನುಸರಿಸುವ ಮೂಲಕ ಮೋಕ್ಷ ಸಾಧನೆಯ ಸೂತ್ರಗಳನ್ನು ತಿಳಿಸಿಕೊಡುವ ಕಾರ್ಯವನ್ನು ಮಾಡುತ್ತವೆ. ಕಾಯಕವು ಆಧ್ಯಾತ್ಮದ ಶ್ರಮದ ದೃಷ್ಟಿಕೋನವಾಗಿದೆ. ಕಾಯಕದಲ್ಲಿಯೇ ಕೈಲಾಸವನ್ನು ಕಾಣುವ ಒಳನೋಟಗಳನ್ನು ವಚನ ಸಾಹಿತ್ಯವು ನಮಗೆ ಒದಗಿಸುತ್ತದೆ. ದಾಸೋಹವು ಸೇವಾ ಕಾರ್ಯವನ್ನು ಸೂಚಿಸುತ್ತದೆ. ಅನ್ನದಾಸೋಹ, ವಿದ್ಯಾದಾಸೋಹದಂತಹ ಕೈಂಕರ್ಯಗಳು ಸೇವೆಯ ಮೂಲಕ ಸಾಯುಜ್ಯವನ್ನು ಸಾಧಿಸಬಹುದಾದ ಮಾರ್ಗಗಳನ್ನು ನಮ್ಮ ಮುಂದೆ ವಚನಗಳು ಇಡುತ್ತವೆ. ಹೀಗೆ ಸ್ವದ ಅರಿವನ್ನು ಪಡೆಯಲು ಇರುವ ಹಲವಾರು ದಾರಿಗಳನ್ನು ಸರಳವಾಗಿ ಬೆಡಗಿನ ಭಾಷೆಯಲ್ಲಿ ವಚನಗಳು ನಿದರ್ಶಿಸುತ್ತವೆ.

ಇಂದು ನಾವು ವಚನ ಚಳುವಳಿ ಎಂದು ಗುರುತಿಸುತ್ತಿರುವ 12ನೇ ಶತಮಾನದ ವಿದ್ಯಮಾನವು ಯಾವುದರ ಕುರಿತು ನಡೆಯಿತು ಎಂಬುದೇ ಬಹುದೊಡ್ಡ ಜಿಜ್ಞಾಸೆಯಾಗಿದೆ. ಆಧುನಿಕ ಸಮಾಜ ವಿಜ್ಞಾನದ ಪರಿಭಾಷೆಗಳು ಭಾರತದ ಆಧ್ಯಾತ್ಮವನ್ನು ಅರ್ಥೈಸಿಕೊಳ್ಳುವಲ್ಲಿ ಸಹಾಯ ಮಾಡುತ್ತಿವೆಯೇ ಎಂಬುದು ಯಕ್ಷಪ್ರಶ್ನೆಯಾಗಿಯೇ ಉಳಿದಿದೆ. ಪ್ರತಿಯೊಂದು ಪರಿಭಾಷೆಗೂ ಸಾಂಸ್ಕೃತಿಕ ಮತ್ತು ಸಾಂಪ್ರದಾಯಿಕ ಸಂದರ್ಭಗಳು ಇರುತ್ತವೆ, ಅದು ಸಮಾಜ ವಿಜ್ಞಾನವಿರಲಿ ಅಥವಾ ಯಾವುದೇ ಭಕ್ತಿ ಪರಂಪರೆಯಿರಲಿ. ಆದರೆ ಭಾರತದ ಭಕ್ತಿ ಪರಂಪರೆಯನ್ನು ನಿರೂಪಣೆ ಮಾಡುವಲ್ಲಿ ನಮಗೆ ಲಭ್ಯವಿರುವ ಭಾಷಿಕ ಪದಪುಂಜಗಳು ಸಮಾಜ ವಿಜ್ಞಾನದ ಭಾಗವಾಗಿವೆ. ಆದರೆ ಈ ಸಮಾಜ ವಿಜ್ಞಾನದ ಪರಿಭಾಷೆಗಳು ಪಾಶ್ಚಾತ್ಯ ಸಂಸ್ಕೃತಿಯ ಹಿನ್ನೆಲೆಯಿಂದ ಉಗಮವಾಗಿದ್ದು, ಜಗತ್ತಿನಾದ್ಯಂತ ಎಲ್ಲಾ ಸಾಮಾಜಿಕ ಸಂಗತಿಗಳನ್ನು ವಿವರಿಸಲು ಅವುಗಳ ಮೇಲೆ ಅವಲಂಬಿತರಾಗಿದ್ದೇವೆ. ಇದರ ಮೂಲಕ ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯತ್ಯಾಸಗಳು ಅಳಿಸಿಹೋಗಿ ಒಂದೇ ರೀತಿಯ ಪರಿಭಾಷೆಗಳು ಎಲ್ಲಾ ಸಂಸ್ಕೃತಿಗಳನ್ನು ವಿವರಿಸಲು ಪ್ರಯತ್ನಿಸುತ್ತವೆ. ಇಂತಹ ಒಂದು ಪ್ರಯತ್ನ ಆಧುನಿಕ ಕಾಲಘಟ್ಟದಲ್ಲಿ ಭಾರತದ ಭಕ್ತಿ ಪರಂಪರೆಯನ್ನು ವಿವರಿಸುವಲ್ಲಿಯೂ ಆಗಿರುವ ಸಾಧ್ಯತೆ ಢಾಳಾಗಿ ಕಾಣುತ್ತದೆ. ಆದ್ದರಿಂದಲೇ ವಚನಗಳ ಮೂಲ ಆಶಯವಾದ ಆಧ್ಯಾತ್ಮವು ಅವುಗಳ ನಿರೂಪಣೆಯಿಂದ ಬದಿಗೆ ಸರಿದಂತೆ ಕಾಣುತ್ತದೆ. ವಿದ್ವಾಂಸ ವಲಯದಲ್ಲಿ ವಚನಗಳ ಕುರಿತು ನಡೆದಿರುವ ಬಹುತೇಕ ಚರ್ಚೆಗಳು ಕೇವಲ ಸಾಮಾಜಿಕ ಆಯಾಮವನ್ನು ಮಾತ್ರ ಪರಿಗಣಿಸುತ್ತವೆ. ವಚನಕಾರರು ಟೀಕಿಸಿರುವ ಸಮಾಜದ ಓರೆಕೋರೆಗಳು ಆಧ್ಯಾತ್ಮದ ಸಂದರ್ಭದಿಂದ ಹೊರಗಿಟ್ಟಾಗ ಆಗುವ ಆಭಾಸಗಳು ಅವುಗಳ ಕುರಿತು ನಡೆದಿರುವ ಚರ್ಚೆಗಳಲ್ಲಿಯೂ ಎದ್ದುಕಾಣುತ್ತದೆ.

ಈ ನಿಟ್ಟಿನಲ್ಲಿ ವಚನ ಸಾಹಿತ್ಯವನ್ನು ಯಾವುದೇ ಪೂರ್ವಾಗ್ರಹಗಳಿಲ್ಲದೇ ವಚನಗಳ ಸರಿಯಾಗಿ ಅರ್ಥೈಸಿ ಕೊಳ್ಳುವ ಉದ್ದೇಶದಿಂದ 'ವಚನ ದರ್ಶನ' ಎನ್ನುವ ಎರಡು ದಿನಗಳ ಸಮ್ಮೇಳನವನ್ನು ಗದಗಿನ ಬಯಲು ವೇದಿಕೆ, ವಿವೇಕ ವೇದಿಕೆ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಕನಕದಾಸ ಶಿಕ್ಷಣ ಸಂಸ್ಥೆ ಹಾಗೂ ಅಖಿಲ ಭಾರತ ಸಾಹಿತ್ಯ ಪರಿಷತ್ತು ಸಂಸ್ಥೆಗಳ



ಸಹಯೋಗದೊಂದಿಗೆ ದಿನಾಂಕ 17 ರಿಂದ 19 ಡಿಸೆಂಬರ್ 2023 ರವರೆಗೆ ಆಯೋಜಿಸಲಾಗಿತ್ತು. ಸಮ್ಮೇಳನಕ್ಕೆ ರಾಜ್ಯದ ವಿವಿದೆಡೆಯಿಂದ ಸುಮಾರು 80ಕ್ಕೂ ಹೆಚ್ಚು ಪ್ರಬಂಧಗಳನ್ನು ಕಳುಹಿಸಿದ್ದರು, ಅವುಗಳಲ್ಲಿ ಆಯ್ದ 23 ಪ್ರಬಂಧಗಳನ್ನು ಸೇರಿಸಿ "ವಚನ ದರ್ಶನ: ಭಕ್ತಿ–ಕಾಯಕ–ದಾಸೋಹ" ಎನ್ನುವ ಕೃತಿಯನ್ನು ಪ್ರಕಾಶಿಸಿ ಬಿಡುಗಡೆ ಮಾಡಲಾಯಿತು, ಹಾಗೆಯೇ ವಚನ ದರ್ಶನ ಎಂಬ ಕಿರುಹೊತ್ತಿಗೆ ಸ್ಮರಣ ಸಂಚಿಕೆಯನ್ನೂ ಸಹ ಬಿಡುಗಡೆಗೊಳಿಸಲಾಯಿತು.

ಪ್ರಸ್ತುತ ಸಮ್ಮೇಳನದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಪ್ರತಿನಿಧಿಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿದ್ದರು. ಉದ್ಘಾಟನೆ ಸಮಾರಂಭದಲ್ಲಿ ಡಾ.ಸಂಗಮೇಶ ಸವದತ್ತಿ ಮಠ, ಹಿರಿಯ ಭಾಷಾ ವಿಜ್ಞಾನ ಚಿಂತಕರು ಉದ್ಘಾಟಣಾ ಭಾಷಣವನ್ನು ಮಾಡುವ ಮೂಲಕ ವಚನಗಳ ಆಶಯಗಳ ಕುರಿತು ಮಾತನಾಡಿದರು. ನಂತರ ದಿವ್ಯಸಾನಿಧ್ಯವನ್ನು ವಹಿಸಿದ್ದ ಶ್ರೀ ಮಾದಾರ ಚನ್ನಯ್ಯ ಸ್ವಾಮೀಜಿಯವರು ವಚನಗಳು ದೈನಂದಿನ ಬದುಕಿಗೆ ಹೇಗೆ ಸಹಾಯಕವಾಗಿವೆ ಮತ್ತು ಆಧ್ಯಾತ್ಮದ ಮಾರ್ಗಕ್ಕೆ ಹೇಗೆ ಸಾಗಬಹುದು ಎಂದು ತಿಳಿಸುವ ಮೂಲಕ ಆಶೀರ್ವಚನ ನೀಡಿದರು. ಮೊದಲನೇ ಗೋಷ್ಠಿಯನ್ನು ಡಾ.ಅಡಿವೆಪ್ಪ ವಾಲಿ ಗುರುಜಿಗಳು ನಡೆಸಿಕೊಟ್ಟು ವಚನಗಳಲ್ಲಿ ಭಕ್ತಿಯ ಮಹತ್ವದ ಕುರಿತು ತಿಳಿಸಿದರು.

ದಿನಾಂಕ 18–12–23ರ ಬೆಳಗ್ಗೆ ಮೊದಲನೇ ಗೋಷ್ಠಿಯನ್ನು ಉಪನ್ಯಾಸಕರಾದ ಡಾ. ಯಲ್ಲಪ್ಪ ಭಜಂತ್ರಿಯವರು ನಡೆಸಿಕೊಟ್ಟರು, ಅವರುಕನ್ನಡ ಸಾಹಿತ್ಯದ ಮೇಲೆ ವಚನಗಳ ಕೊಡುಗೆಯ ಕುರಿತು ತಮ್ಮ ಉಪನ್ಯಾಸವನ್ನು ಮಂಡಿಸಿದರು. ಆದಿ ಕವಿ ಪಂಪ ಹಾಗು ವಚನಕಾರರನ್ನು ತುಲನಾತ್ಮಕವಾಗಿ ನೋಡುವ ಪ್ರಯತ್ನವನ್ನು ಶ್ರೀಯುತರು ಮಾಡಿದರು. ನಂತರದ ಗೋಷ್ಠಿಯನ್ನು ಕುವೆಂಪು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ರಾಜಾರಾಮ ಹೆಗಡೆಯವರು ನಡೆಸಿಕೊಟ್ಟರು, ಅವರು ವಚನಗಳನ್ನು ನೋಡುವಲ್ಲಿ ವಸಾಹತು ಪ್ರಜ್ಞೆ ಹೇಗೆ ಅಡ್ಡಿಯಾಗಿದೆ ಹಾಗೂ ವಚನಗಳನ್ನು ಅರ್ಥೈಸಿಕೊಳ್ಳಲು ಅಗತ್ಯವಿರುವ ಪ್ರವೇಶಿಕೆಯ ಕುರಿತು ವಿವರವಾಗಿ ಮಾತನಾಡಿದರು. ನಂತರ ಸುಮಾರು 40 ಸಂಶೋಧಕರು ತಮ್ಮ ಲೇಖನಗಳನ್ನು ಮಂಡಿಸುವ ಗೋಷ್ಠಿಯನ್ನು ಆಯೋಜಿಸಲಾಗಿತ್ತು. ಜೀವನದರ್ಶನ, ಭಕ್ತಿ, ಕಾಯಕ, ಸಮಾಜ ಸುಧಾರಣೆ, ಶಿವಶರಣ ಮುಂತಾದ ವಿಷಯಗಳ ಮೇಲೆ ಲೇಖನಗಳು ಬೆಳಕು ಚೆಲ್ಲಿದವು.

ಮಧ್ಯಾಹ್ನ ಆರಂಭಗೊಂಡ ಗೋಷ್ಠಿಯನ್ನು ಡಾ.ಜ್ಯೋತಿ ಶಂಕರರವರು ನೆರವೇರಿಸಿಕೊಟ್ಟರು. ಮಹಿಳೆ ಮತ್ತು ವಚನ ಸಾಹಿತ್ಯ ಎಂಬ ವಿಷಯದ ಕುರಿತು ತಮ್ಮ ವಿಚಾರಗಳನ್ನು ಮಂಡಿಸಿದರು. ಇದರುವರೆಗೂ ಸ್ತ್ರೀವಾದದ ನೆಲೆಯಿಂದ ನೀಡಿರುವ ವಚನಕಾರರನ್ನು ಹಾಗೂ ವಚನ ಕಾರ್ತಿಯರನ್ನು ವಿಭಿನ್ನ ದೃಷ್ಟಿಕೋನದಿಂದ ಅರ್ಥೈಸಲು ಪ್ರಯತ್ನಿಸಿದರು. ಮಹಿಳೆಯರ ಕುರಿತು ಇರುವ ವಚನಗಳನ್ನು ಉಲ್ಲೇಖಿಸಿ ಅವುಗಳನ್ನು ಅರ್ಥ ಮಾಡಿಕೊಳ್ಳ




ಬಹುದಾದ ವಿಭಿನ್ನ ನೆಲೆಗಳನ್ನು ಪರಿಚಯಿಸಿದರು. ನಂತರದ ಗೋಷ್ಠಿಯಲ್ಲಿ ಸಮಾಜ ಸುಧಾರಣೆಯ ಕುರಿತು ಮಾತನಾಡಿದ ಡಾ.ಬಿ.ವಿ ವಸಂತ ಕುಮಾರ ಅವರು ವಚನಕಾರರು ಯಾವುದೇ ಧರ್ಮವನ್ನು ವಿರೋಧಿಸಲಿಲ್ಲ ಬದಲಿಗೆ ಅವುಗಳನ್ನು ಸರಿಪಡಿಸುವ ಕಾರ್ಯವನ್ನು ಮಾಡಿದರು ಎಂದು ತಿಳಿಸಿದರು.

ದಿನಾಂಕ 19–12–23 ರ ಬೆಳಗಿನ ಗೋಷ್ಠಿಯಲ್ಲಿ ಅಧ್ಯಾಪಕರಾದ ಶ್ರೀ ಅಶೋಕ ಹಂಚಲಿಯವರು ಮಾತನಾಡಿ ಕಾಯಕ ದಾಸೋಹ ಪರಿಕಲ್ಪನೆಯ ಕುರಿತು ವಿವರವಾಗಿ ವಿಚಾರಗಳನ್ನು ಹಂಚಿಕೊಂಡರು. ತದನಂತರ ನಡೆದ ಅನುಭವ ಮಂಟಪ ಎಂಬ ಸಂವಾದ ಗೋಷ್ಠಿಯಲ್ಲಿ ಪ.ಪೂ. ಶ್ರೀ ಸದಾಶಿವಾನಂದ ಮಹಾಸ್ವಾಮಿಗಳು ಹಾಗೂ ಧಾರವಾಡ ಮಠದ ಶ್ರೀಗಳು ಭಾಗವಹಿಸಿ ಪ್ರೇಕ್ಷಕರ ಹಲವಾರು ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಸಂವಾದವನ್ನು ಯಶಸ್ವಿಗೊಳಿಸಿದರು. ಕೊನೆಗೆ ಸಮಾರೋಪ ನುಡಿಗಳನ್ನಾಡಿದ ಶ್ರೀ ರಘುನಂದನ್ ಅವರು ವಚನಗಳ ಮೂಲಭೂತ ಆಶಯಗಳನ್ನು ಮತ್ತು ಅದರಲ್ಲಿರುವ ಆಧ್ಯಾತ್ಮದ ಹೊಳಹುಗಳನ್ನು ಪರಿಚಯಿಸಿದರು. ವಚನಗಳನ್ನು ನೋಡುವ ದೃಷ್ಟಿಕೋನವು ಹೇಗಿರಬೇಕು ಎಂಬುದರ ಕುರಿತು ತಮ್ಮ ಅಭಿಪ್ರಾಯವನ್ನು ಮಂಡಿಸಿದರು. ಒಟ್ಟು ಕಾರ್ಯಕ್ರಮ ಯಶಸ್ವಿಯಾಗುವಲ್ಲಿ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಹಾಗೂ ಕುಲಸಚಿವರಾದ ಪ್ರೊ. ಸುರೇಶ ವಿ. ನಾಡಗೌಡರ ಅವರು ಅವಿರತ ಪ್ರಯತ್ನದ ಫಲವಾಗಿ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

***

# ಸಾವಯವ ಕೃಷಿಯಲ್ಲಿ ಸಾಧನೆಗೈದ ಸಾಧಕರ ಯಶೋಗಾಥೆ : ಶ್ರೀ ದೇವರಡ್ಡಿ ಅಗಸನಕೊಪ್ಪ ಸಾ॥ ಬಿಂಕದಕಟ್ಟಿ



**ಡಾ. ಸಂಜಯಕುಮಾರ ಶಿ. ಹಾರೋಬಿಡಿ**
ಪ್ರಕಟಣಾ ಸಂಯೋಜಕರು,
ತರಬೇತಿ, ಪ್ರಕಟಣೆ ಹಾಗೂ ಮೇಲ್ವಿಚಾರಣೆ ಕೇಂದ್ರ,
ಕ.ರಾ.ಗ್ರಾ. ಮತ್ತು ಪಂ. ರಾಜ್ ವಿಶ್ವವಿದ್ಯಾಲಯ, ಗದಗ



**ಡಾ. ಉಡಚಪ್ಪ ಪೂಜಾರ್**
ಸಹಾಯಕ ನಿರ್ದೇಶಕರು,
ತೋಟಗಾರಿಕೆ
ಕ.ರಾ.ಗ್ರಾ. ಮತ್ತು ಪಂ. ರಾಜ್ ವಿಶ್ವವಿದ್ಯಾಲಯ, ಗದಗ

ಪ್ರಾಚೀನ ಕಾಲದಿಂದಲೂ ಕೃಷಿ ಮಾನವ ಜನಾಂಗದ ಏಳ್ಗೆಯನ್ನು ಸಾಧಿಸುವಲ್ಲಿ ಪ್ರಮುಖವಾಗಿದ್ದು, ಆ ಸಮುದಾಯದ ಶ್ರೋಭಿವೃದ್ಧಿಗೆ ಕಾರಣವಾಗಿದೆ. ಸರ್ವಜ್ಞನ ವಚನದಂತೆ ಎಲ್ಲ ಜ್ಞಾನಕ್ಕಿಂತ ಮಿಗಿಲಾದ ಜ್ಞಾನವೆಂದರೆ, ವ್ಯವಸಾಯ ವಿಧಾನ ಅದನ್ನೇ "ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು ಮೇಟಿಯಿಂ ರಾಟಿ ನಡೆದುದಲ್ಲದೇ ದೇಶ ದಾಟವೇ ಕೆಡಗು ಸರ್ವಜ್ಞ" ಎಂಬ ವಚನದಲ್ಲಿ ಅಭಿವ್ಯಕ್ತಪಡಿಸಿದ್ದಾನೆ. ನಮ್ಮ ದೇಶವನ್ನು ಜಗತ್ತಿನ ಇತರೆ ದೇಶಗಳೊಂದಿಗೆ ಹೋಲಿಸಿದಾಗ ಭಾರತ ಕೃಷಿ ಪ್ರಧಾನ ಕುಟುಂಬವಾಗಿದ್ದು, ದೇಶದಾದ್ಯಂತ ಭೂಮಿತಾಯಿಯನ್ನು ನಂಬಿದ ಕೃಷಿ ಕುಟುಂಬಗಳು ಸಮಾಜದ ಎಲ್ಲ ವರ್ಗದವರ ಹಸಿವನ್ನು ನೀಗಿಸುವ ಕೆಲಸವನ್ನು ಮಾಡುತ್ತಿವೆ."ಕೃಷಿತೋನಾಸ್ತಿ ದುರ್ಭಿಕ್ಷಂ" ಎನ್ನುವ ನಾಣ್ಣುಡಿಯಂತೆ ಕೃಷಿ ಮನುಷ್ಯನ ಎಲ್ಲ ದಾರಿದ್ರ್ಯವನ್ನು ದೂರ ಮಾಡುತ್ತದೆ ಮತ್ತು ವ್ಯವಸಾಯವನ್ನು ನಂಬಿದವರಿಗೆ ಎಂದಿಗೂ ಕೇಡಾಗುವುದಿಲ್ಲ ಎಂಬ ಲೋಕರೂಢಿ ಸತ್ಯವಾಗಿದೆ.

ಇಂತಹ ನಂಬಿಕೆವುಳ್ಳ ಕೃಷಿ ಚಟುವಟಿಕೆಗಳು ಸಮಕಾಲಿನ ಸಂದರ್ಭದಲ್ಲಿ ಇಳಿಮುಖವಾಗುತ್ತಿರುವುದು ಕಂಡುಬರುತ್ತಿದೆ. ಕೃಷಿ ಕೆಲಸವೇ ಬೇಡವೆಂದು ದೂರ ಹೋಗುತ್ತಿರುವುದು, ಕೈಗಾರಿಕೆಗಳ ನಿರ್ಮಾಣಕ್ಕೆ ಮತ್ತು ವಸತಿ ಸಂಕೀರ್ಣ ನಿರ್ಮಾಣ ಮಾಡಲು ಮಾರಾಟ ಮಾಡಿ ಸುಖ ಜೀವನ ಸಾಗಿಸಬಹುದೆಂಬ ಭ್ರಮೆಯಲ್ಲಿ ಜೀವನ ಪರ್ಯಂತ ನೆಮ್ಮದಿಯಿಲ್ಲದೆ ಬದುಕನ್ನು ಸಾಗಿಸುವ ಸಂದರ್ಭಗಳು ನಮ್ಮ ಕಣ್ಮುಂದೆ ನಡೆಯುತ್ತಿರುತ್ತವೆ. ಕಾರಣ ಹುಡುಕಲು ಹೊರಟರೆ ಉತ್ತರ ಸ್ಪಷ್ಟ. ಅರೆ ಮಳೆಗಾಲ ಹಾಗೂ ಬೆಳೆದ ಬೆಳೆಗಳಿಗೆ ಮೌಲ್ಯಯುತವಾದ ಬೆಲೆ ಸಿಗದಿರುವುದು. ಇನ್ನೂ ಮುಂದೆ ಹೋಗಿ ವಿಚಾರ ಮಾಡಿದಾಗ ವ್ಯವಸಾಯ ಮಾಡುವವರನ್ನು ಸಮಾಜ ನೋಡುವ ದೃಷ್ಟಿಕೋನಗಳು ಕೂಡ ಕೃಷಿಯಲ್ಲಿ ತೊಡಗಿಸಿಕೊಳ್ಳುವಲ್ಲಿ ಹಿಂದೇಟು ಹಾಕುತ್ತಿರುವುದು ಕಂಡುಬರುತ್ತಿದೆ.



ಇವೆಲ್ಲ ದೀರ್ಘಕಾಲದ ಪ್ರಕ್ರಿಯೆಗಳ ಜೊತೆಗೆ ಕೆಲವು ಸಾಧಕರು ಕೃಷಿಯನ್ನೆ ತಮ್ಮ ಕ್ಷೇತ್ರವನ್ನಾಗಿಸಿ ಕೊಂಡು ಆಧಾಯವನ್ನು ಇಮ್ಮಡಿಗೊಳಿಸಿಕೊಳ್ಳುತ್ತಿದ್ದಾರೆ. ಅಂತಹ ಸಾಧಕರ ಪರಿಚಯ ಈ ಲೇಖನದಲ್ಲಿದೆ. ಉತ್ತರ ಕರ್ನಾಟಕದ ಬಯಲು ಸೀಮೆಯ ಸೆರಗಿನಂತೆ ಕಾಣುವ ಮತ್ತು ಬರಗಾಲದ ಪ್ರದೇಶ ಎಂಬ ಖ್ಯಾತಿಯನ್ನು ಪಡೆದಿರುವ ಜಿಲ್ಲೆಗಳ ವ್ಯಾಪ್ತಿಯೊಳಗೆ ಗದಗಕ್ಕೂ ಸ್ಥಾನವಿದೆ. ಈ ಪ್ರದೇಶವು ಸಂಪೂರ್ಣ ಮಳೆಯಾಶ್ರಿತ ಭೂಮಿಯಾಗಿದ್ದು ಸಕಾಲಕ್ಕೆ ಮಳೆ ಬಂದರೆ ಉತ್ತಮ ಫಸಲು ಪಡೆಯಲು ಸಾಧ್ಯವಾಗುತ್ತದೆ. ಮಳೆ ಬರದಿದ್ದರೆ ಆ ವರ್ಷ ಬರಗಾಲವೆಂದೇ ಅರ್ಥ. ಇಂತಹ ನಾಡಿನಲ್ಲಿ ಬಹುತೇಕರು ಮಳೆಯಾಶ್ರಿತ ಬೇಸಾಯ ಪದ್ಧತಿಯನ್ನು ಮಾಡುತ್ತ ಬಂದಿದ್ದಾರೆ. ಆರ್ಥಿಕವಾಗಿ ಸಬಲರಾಗಿರುವ ಕೆಲವು ಕುಟುಂಬಗಳು ಕೊಳವೆ ನೀರಾವರಿಯ ಮೂಲಕ ವ್ಯವಸಾಯ ಮಾಡುತ್ತಿದ್ದಾರೆ. ಇವರಲ್ಲಿ ಕೆಲವರು ಸಂಪೂರ್ಣವಾಗಿ ಸಾವಯವ ಕೃಷಿ ವಿಧಾನವನ್ನು ಅನುಸರಿಸಿಕೊಂಡು ಆಧಾಯದ ಜೊತೆಗೆ ನೆಮ್ಮದಿ ಜೀವನವನ್ನು ಸಾಗಿಸುತ್ತ ಬಂದಿದ್ದಾರೆ. ಕೃಷಿಯನ್ನೇ ಮೂಲ ವೃತ್ತಿಯನ್ನಾಗಿ ಮಾಡಿಕೊಂಡಿರುವ ರೈತರಿಗೆ ವ್ಯವಸಾಯದಲ್ಲಿ ಹೊಸ ಆಶಾಭಾವ ಮೂಡಿಸುವ ಪ್ರಯತ್ನ ನಮ್ಮದಾಗಿದೆ. ಅಂತಹ ಸಾಧಕರನ್ನು ಪರಿಚಯಿಸುವ ಅಂಕಣ ಇದಾಗಿದೆ.



ಸಂದರ್ಶನ : **ಶ್ರೀ ದೇವರಡ್ಡಿ ಅಗಸನಕೊಪ್ಪ**

ಸಂದರ್ಶಕರು : **ಡಾ. ಸಂಜಯಕುಮಾರ**
**ಡಾ. ಉಡಚಪ್ಪ ಪೂಜಾರ**

ಸರ್, ನಮಸ್ಕಾರ ನಾವು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗದಿಂದ ಬಂದಿದ್ದೇವೆ. ತಾವು ಕೃಷಿ ಮತ್ತು ತೋಟಗಾರಿಕೆಯಲ್ಲಿ ಮಾದರಿಯಾಗುವಂತೆ ಸಾವಯವ ವಿಧಾನದಲ್ಲಿ ಉತ್ತಮ ಬೆಳೆ ಬೆಳೆಯುತ್ತಿದ್ದೀರಿ. ನಿಮ್ಮ ಈ ಪ್ರಯತ್ನ ಮತ್ತು ಯಶಸ್ವಿ ಯಶೋಗಾಥೆ ನಮ್ಮ ರೈತ ಸಮುದಾಯಗಳಿಗೆ ತಲುಪಿಸುವ ನಿಟ್ಟಿನಲ್ಲಿ ಅನೌಪಚಾರಿಕ ಸಂದರ್ಶನವನ್ನು ತಮ್ಮೊಂದಿಗೆ ಮಾಡಲಿದ್ದೇವೆ.

ತಮಗೂ ನಮಸ್ಕಾರಗಳು.

**1) ಸರ್ ತಮ್ಮ ಬಾಲ್ಯ ಶಿಕ್ಷಣ ಮತ್ತು ಬೆಳೆದು ಬಂದ ವಾತಾವರಣ ಹೇಗಿತ್ತು?**

* ನಮ್ಮದು ಮೂಲತ : ಕೃಷಿ ಕುಟುಂಬ. ನಮ್ಮ ತಂದೆಯವರ ಊರು ಗದಗ ಜಿಲ್ಲಾ ವ್ಯಾಪ್ತಿಗೆ ಸೇರುವ ಹರ್ಲಾಪೂರ ಎಂಬ ಗ್ರಾಮ. ನಮ್ಮ ಅಜ್ಜ ಮತ್ತು ಅಜ್ಜಿ ವ್ಯವಸಾಯದಲ್ಲಿ ಕಠಿಣ ಶ್ರಮವಹಿಸಿ ಅನೇಕ ಸಂಕಷ್ಟಗಳ ಮಧ್ಯೆ ಜೀವನ ಸಾಗಿಸಿ ಬಂದವರು. ಅದೆಲ್ಲವನ್ನು ನೋಡಿ ನನಗೆ ಕೃಷಿಯಲ್ಲಿ ಏನಾದರು ಹೊಸದನ್ನು ಮಾಡಬೇಕೆಂಬ ಆಸೆ ಮನಸ್ಸಿನಲ್ಲಿ ಮೂಡಿತ್ತು. ನಮ್ಮ ತಂದೆಯವರು ನೀರಾವರಿ ಇಲಾಖೆಯ ಅಧಿಕಾರಿಗಳಾಗಿದ್ದರಿಂದ ಅವರ ಜೊತೆಗೆ ಜಮೀನುಗಳಿಗೆ ಹೋಗುತ್ತಿದ್ದೆ. ಅವರು ವರ್ಗವಾದ ಕಡೆಗೆಲ್ಲ ನಮ್ಮ ಪಯಣ ನಿರಂತರವಾಗಿರುತ್ತಿತ್ತು. ಇದೆಲ್ಲರ ಮಧ್ಯೆ ನಾನು ಬಿ.ಇ. ಆಟೋಮೊಬೈಲ್ ಕೋರ್ಸ್ ಪೂರ್ಣಗೊಳಿಸಿದೆನು.

**2) ತಾವು ಶಿಕ್ಷಣ ಮುಗಿಸಿದ ನಂತರ ಪ್ರಾರಂಭಿಸಿದ ವೃತ್ತಿ ಯಾವುದು?**

* ನಾನು ನನ್ನ ಇಂಜನೀಯರಿಂಗ್ ಶಿಕ್ಷಣ ಮುಗಿಸಿದ ಮೇಲೆ ಸಣ್ಣಪುಟ್ಟ ರಸ್ತೆ ಕಾಮಗಾರಿಗಳನ್ನು ಗುತ್ತಿಗೆ ಆಧಾರದಲ್ಲಿ ಮಾಡುತ್ತಿದ್ದೆ. ಈ ಕೆಲಸದಲ್ಲಿ ನನಗೆ ತೃಪ್ತಿ ಇರಲಿಲ್ಲ, ಮನೆಯವರೆಲ್ಲರ ಒತ್ತಾಯಕ್ಕೆ ಈ ಕೆಲಸ ಶುರು ಮಾಡಿದೆ. ಆದರೆ ಮನಸ್ಸಿನಲ್ಲಿದ್ದ ವ್ಯವಸಾಯದ ಕುರಿತ ವಿಚಾರಗಳು ಆಗಾಗ ನನ್ನನ್ನು ಕಾಡುತ್ತಲಿದ್ದವು.

**3) ಕೃಷಿ ಮಾಡಬೇಕೆಂದುಕೊಂಡಿದ್ದೀರಿ, ಆದರೆ ಸಾವಯವ ಕೃಷಿ ಮಾಡಬೇಕು ಎಂಬ ವಿಚಾರ ಬಂದದ್ದು ಹೇಗೆ ಮತ್ತು ಯಾವಾಗ?**

* ನಮ್ಮ ಹಿರಿಯರು ಕೃಷಿ ಮಾಡುವಾಗ ಯಾವ ರಾಸಾಯನಿಕ ಗೊಬ್ಬರಗಳನ್ನು ಬಳಸದೆ ಉತ್ತಮ ಬೆಳೆ ಬೆಳೆಯುತ್ತಿದ್ದರು. ಕೆಲವು ವರ್ಷಗಳು ಕಳೆದ ಮೇಲೆ ರೈತರು ರಾಸಾಯನಿಕ ಗೊಬ್ಬರಗಳ ಮೊರೆ ಹೋಗಿ ಭೂಮಿಯ ಸತ್ವ ಕಡಿಮೆಯಾಗಲು ಶುರುವಾಯಿತು. ಜೊತೆಗೆ ಧಾನ್ಯಗಳ ಗುಣಮಟ್ಟವು ಕ್ಷೀಣಿಸಿತು. ಇಂತಹ ಸಂದರ್ಭದಲ್ಲಿ ನನಗೆ ಗದಗನಲ್ಲಿ ಸ್ಥಾಪಿತವಾಗಿದ್ದ "ರೈತ ಧರಿತ್ರಿ ಕೃಷಿ ಪರಿವಾರ" ಎಂಬ ಸಂಘದ ಸಂಪರ್ಕವುಂಟಾಯಿತು. ಇದು ಬಹುಶ: 1989ರಲ್ಲಿ ನಡೆದ ಘಟನೆ. ಆ ಸಂಘದ ಉದ್ದೇಶವೇ ಸಾವಯವ ಪದ್ಧತಿಯಲ್ಲಿ ವ್ಯವಸಾಯ ಮಾಡುವುದು ಜೊತೆಗೆ ಅಂತಹ ಬೆಳೆಗಳಿಗೆ ಉತ್ತಮವಾದ ಮಾರುಕಟ್ಟೆಯನ್ನು ಒದಗಿಸಿಕೊಡುವುದು.

**4) ನೀವು ಸಾವಯವ ಕೃಷಿ ಪ್ರಾರಂಭಿಸಿದಾಗ ನಿಮ್ಮ ಕುಟುಂಬದ ಪ್ರತಿಕ್ರಿಯೆ ಹೇಗಿತ್ತು?**

* ಮನೆಯವರಿಂದ ಬಂದ ಮೊದಲ ಉತ್ತರವೇ "ಇದೆಲ್ಲ ಬೇಡ, ಆಗಲಾರದ ಕೆಲಸ ನಿನ್ನ ವಿದ್ಯೆಗೆ ತಕ್ಕಂತ ಹುದ್ದೆಗೆ ಹೋಗು" ಎಂದರು. ಅವರ ಮಾತು ಕೇಳದಿದ್ದಾಗ ಬುದ್ಧಿ ಮಾತು ಹೇಳಿದರು. ಆಗ ಅವರಿಗೆ ಎದುರು ವಾದಿಸದೆ, ನಾನೇ ಸ್ವತ ಭೂಮಿಯಲ್ಲಿ ಪ್ರಯೋಗ ಮಾಡಬೇಕೆಂದುಕೊಂಡೆ.

ಆಗ ಗದಗನಲ್ಲಿ ಒಬ್ಬ ರೈತ ಪಾಳು ಬಿದ್ದಿದ್ದ 10 ಎಕರೆ ಜಮೀನನ್ನು ಹಸನು ಮಾಡಿ ವ್ಯವಸಾಯ ಮಾಡಿಕೊಳ್ಳುವಂತೆ ಹೇಳಿದನು. ಈ ಘಟನೆ ನನ್ನ ಆಸೆಗೆ ಪುನಶ್ಚೇತನ ನೀಡಿತು. ಈ ವಿಷಯ ಮನೆಯವರಿಗೆ ತಿಳಿದಿರಲಿಲ್ಲ. ಈ ಹೊಲದಲ್ಲಿ ನನ್ನ ಮೊದಲ ಪ್ರಯೋಗ ಯಶಸ್ವೀಯಾಯಿತು. 1995–96 ರಲ್ಲಿ 10ಎಕರೆ ಹೊಲದಲ್ಲಿ ರಾಸಾಯನಿಕ ಬಳಸದೇ ವ್ಯವಸಾಯ ಮಾಡಿದೆ. ಭರವಸೆ ಮೂಡಿತು.

**5) ರಾಸಾಯನಿಕ ಬಳಸಿ ಭೂಮಿಯ ಫಲವತ್ತತೆ ಕ್ಷೀಣವಾಗುತ್ತಿದ್ದ ಸಂದರ್ಭದಲ್ಲಿ ತಾವು ಹೇಗೆ ಫಲವತ್ತತೆಯನ್ನು ದ್ವೀಗುಣಗೊಳಿಸಿದಿರಿ? ಮತ್ತು ಸಾವಯವ ಕೃಷಿಯನ್ನೇ ಮಾಡಬೇಕೆಂಬ ಛಲಕ್ಕೆ ಪ್ರೇರಣೆ ಯಾರು?**

* ಸ್ವ ಹಿತಾಶಕ್ತಿ ಮೇರೆಗೆ ಕೃಷಿ ಮಾಡಲು ತೊಡಗಿಸಿಕೊಂಡಾಗ ನಾನು ಮಾಡಿದ ಮೊದಲ ಕೆಲಸ ಏನೆಂದರೆ, ಹದಗೊಳಿಸಿದ ಮಣ್ಣಿನಲ್ಲಿ ಎಲ್ಲ ಬಗೆಯ ಹಸಿರು ತರಕಾರಿ, ದ್ವಿದಳ ಧಾನ್ಯಗಳು ಹಾಗೂ ಸಿರಿಧಾನ್ಯಗಳನ್ನು ಸೇರಿಸಿ ಬಿತ್ತನೆ ಮಾಡಿದೆ. ಬೆಳೆ ಬೆಳೆದು ಫಲ ಕೊಡುವ ಸಂದರ್ಭದಲ್ಲಿ ಅದೆಲ್ಲವನ್ನು ಸಂಪೂರ್ಣವಾಗಿ ಹರಗಿ ಮಣ್ಣಿನಲ್ಲಿಯೇ ಸೇರುವಂತೆ ಮಾಡಿದೆ. ಇವೆಲ್ಲವು ಹಸಿರೆಲೆ ಗೊಬ್ಬರವಾಗಿ ಪರಿವರ್ತನೆಯಾಯಿತು. ಹಿಂಗಾರಿ ಬೆಳೆ ಕಡಲೆಯನ್ನು ಬಿತ್ತಿದೆ. ಫಸಲು ಕೈಗೆ ಬಂತು. ಅದರ ಗಾತ್ರ ಮತ್ತು ಗುಣಮಟ್ಟದ ಕಡಲೆಯನ್ನು ಇವತ್ತಿಗೂ ನಾನು ಕಂಡಿಲ್ಲ. ಈ ಘಟನೆ ಸಾಂಪ್ರದಾಯಿಕ ಕೃಷಿ ಪದ್ಧತಿಯಲ್ಲಿ ಕಡಿಮೆ ಕರ್ಚಿನಲ್ಲಿ ಉತ್ತಮ ಗುಣಮಟ್ಟದ ಬೆಳೆ ಬೆಳೆಯಬಹುದು ಎಂಬುದು ಮನವರಿಕೆಯಾಯಿತು. ನನಗೆ ಸುಮಾರು 150 ವರ್ಷಗಳ ಹಿಂದೆ ಬರೆದಿದ್ದ "ಕೃಷಿ ಜ್ಞಾನ ಪ್ರದೀಪಿಕೆ" ಕೃತಿಯಲ್ಲಿನ ಆಡು ಭಾಷೆಯ ನುಡಿಗಳಿಂದ ಬರೆದಿದ್ದ ಕೃಷಿ ವಿಧಾನ ನನಗೆ ಬಹಳ ಇಷ್ಟವಾಯಿತು.

**6) ಪ್ರಸ್ತುತ ಸಾವಯವ ಕೃಷಿ ವಿಧಾನದಲ್ಲಿ ಎಷ್ಟು ಎಕರೆ ಹೊಲ ಉಳುಮೆ ಮಾಡುತ್ತಿದ್ದೀರಿ? ಯಾವ ಯಾವ ಬೆಳೆಗಳನ್ನು ಬೆಳೆಯುತ್ತೀರಿ? ಇವುಗಳಿಗೆ ತಗಲುವ ಖರ್ಚು ಮತ್ತು ವಾರ್ಷಿಕ ಆಧಾಯ ಎಷ್ಟು?**

* ನಮ್ಮ ಪೂರ್ವಿಕರ ಜಮೀನು ಮತ್ತು ಸ್ವಂತ ಜಮೀನು ಸೇರಿ ಒಟ್ಟು 48 ಎಕರೆ ಜಮೀನಿನಲ್ಲಿ ಸಾವಯವ ಕೃಷಿ ಮಾಡುತ್ತಿದ್ದೇನೆ. ಬಿಂಕದಕಟ್ಟಿಯಲ್ಲಿ 5 ಎಕರೆ ಮತ್ತು ಶಿರಹಟ್ಟಿ ತಾಲೂಕಿನ ಕಡಕೋಳ ಗ್ರಾಮದಲ್ಲಿ 43 ಎಕರೆ ಸಂಪೂರ್ಣವಾಗಿ ಸಾಂಪ್ರದಾಯಿಕ ಪದ್ಧತಿಯಲ್ಲಿ ಸಿರಿಧಾನ್ಯಗಳನ್ನು ಹಾಗೂ ವಿವಿಧ ಹಣ್ಣುಗಳನ್ನು ಬೆಳೆಯುತ್ತೇವೆ. ನಮ್ಮ ತೋಟದಲ್ಲಿ 54 ದೇಸಿ ಹಸುಗಳಿವೆ. ಅವುಗಳ ಸಗಣಿ–ಗಂಜಲಿನಿಂದ ತಯಾರಿಸಿದ ಜೀವಾಮೃತ ಬಳಸುತ್ತೇವೆ. ಹಾಗಾಗಿ ಕರ್ಚು ಕಡಿಮೆ. ಮಾವು, ದಾಳಿಂಬೆ, ಚಿಕ್ಕು, ಗೋಡಂಬಿ, ತೇಗದಮರ ಹೀಗೆ ಅನೇಕ ಸಸ್ಯಗಳನ್ನು ಬೆಳೆದಿದ್ದೇವೆ. ನನಗೆ ಇದರಲ್ಲಿ ಲಾಭ ನಷ್ಟದ ವಿಚಾರವಿಲ್ಲ. ನೆಮ್ಮದಿಯಿಂದ ಜೀವನ ನಡೆದಿದೆ ಎಂದು ಹೇಳಬಯಸುತ್ತೇನೆ.

**7) ನೀವು ಬೆಳೆದ ಬೆಳೆಗಳಿಗೆ ಮಾರುಕಟ್ಟೆ ವ್ಯವಸ್ಥೆ ಹೇಗಿದೆ? ಗ್ರಾಹಕರ ಪ್ರತಿಕ್ರಿಯೆ ಏನು?**

* ನಾನು "ಧರಿತ್ರಿ ಕೃಷಿ ಪರಿವಾರ" ಸಂಘಟನೆಯ ಸದಸ್ಯನಾಗಿದ್ದು, ಸಿರಿಧಾನ್ಯಗಳಿಗೆ ಒಳ್ಳೆಯ ಬೆಲೆಯಿದೆ. ನಮ್ಮ ಬೆಳೆಯ ಉತ್ಕೃಷ್ಟ ಗುಣಮಟ್ಟವನ್ನು ಮೆಚ್ಚಿದ ಗ್ರಾಹಕರು ಮುಂಗಡವಾಗಿ ಬೇಡಿಕೆ ಇಡುತ್ತಾರೆ. ಹಾಗಾಗಿ ಬೆಂಗಳೂರು ಮತ್ತು ಅಹ್ಮದಾಬಾದ್ ನಗರಗಳಿಗೆ ನಮ್ಮ ಬೆಳೆಗಳು ಮತ್ತು ಹಣ್ಣುಗಳು ಉತ್ತಮ ಬೆಲೆಯಲ್ಲಿ ಮಾರಾಟವಾಗುತ್ತವೆ.

**8) ಸಾವಯವ ಕೃಷಿಗೆ ಸರ್ಕಾರದ ಸಹಾಯಧನ ಪಡೆದಿದ್ದೀರಾ?**

* ಅಂತಹ ಯಾವ ಯೋಜನೆಗಳನ್ನು ಬಳಸಿಕೊಂಡಿಲ್ಲ. ಹಲವು ಸಲ ಪ್ರಯತ್ನವನ್ನು ಮಾಡಿದ್ದೇನೆ. ಕೆಲವು ತಾಂತ್ರಿಕ ಕಾರಣಗಳಿಂದ ಹಿನ್ನೆಡೆಯಾಗಿದೆ.

**9) ಇಂದಿನ ರೈತರಿಗೆ ಮತ್ತು ಯುವ ಪೀಳಿಗೆಯವರಿಗೆ ಸಾವಯವ ವಿಧಾನದಲ್ಲಿ ಬೆಳೆ ಬೆಳೆಯಲು ಇಚ್ಛಿಸಿದಲ್ಲಿ ತಮ್ಮ ಸಲಹೆ ಏನು?**

* ನಾನು ಹೇಳುವುದಿಷ್ಟೆ ನಮ್ಮ ಪೂರ್ವಿಕರು ರಾಸಾಯನಿಕ ಗೊಬ್ಬರ ಬಳಸದೇ ಉತ್ತಮ ಗುಣಮಟ್ಟದ ಬೆಳೆಗಳನ್ನು ಬೆಳೆಯುತ್ತಿದ್ದರು. ಏಕೆಂದರೆ, ಭೂಮಿಯಲ್ಲಿ ಎಲ್ಲ ಜೀವಸತ್ವಗಳಿವೆ. ಅವುಗಳನ್ನು ಕಾಪಾಡಿಕೊಂಡು ಹೋಗಬೇಕಷ್ಟೆ. ಉದಾಹರಣೆಗೆ ಕಲ್ಲು ಬಂಡೆಗಳ ಮಧ್ಯದಲ್ಲಿ ಬೃಹದ್ಾಕಾರದ ಮರ ಬೆಳೆಯುತ್ತದೆ. ನಾವ್ಯಾರು ಅದಕ್ಕೆ ನೀರು ಗೊಬ್ಬರ ಹಾಕಿಲ್ಲ. ಇದನ್ನೇ ನಾನು ಪಾಲಿಸಿದೆ ಫಲ ಸಿಕ್ಕಿತು. ಈ ಕಾರಣಕ್ಕೆ ಭೂಮಿ ಎಷ್ಟೆ ಬರುಡಾಗಿದ್ದರೂ ಕೂಡ ಅದಕ್ಕೆ ಹಸಿರೆಲೆ ಪೋಷಣೆ ಮಾಡುವುದರಿಂದ ಫಲವತ್ತಾಗಿ ಮಾಡಬಹುದು. ಸಾವಯುವದ ಪರಿಣಾಮ ನಿಧಾನಗತಿಯಲ್ಲಿ ಫಲಶೃತಿ ತಂದು ಕೊಡುತ್ತದೆ. ಸಾವಯುವ ಬೆಳೆಯನ್ನು ಪ್ರೋತ್ಸಾಹಿಸುವ ಅನೇಕ ಸಂಘಟನೆಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳ ಜೊತೆಗೆ ಕೈಜೋಡಿಸುವುದರಿಂದ ನಾವು ಬೆಳೆದ ಬೆಳೆಗಳಿಗೆ ಮಾರುಕಟ್ಟೆ ವ್ಯವಸ್ಥೆ ಮತ್ತು ಉತ್ತಮ ಬೆಲೆಯನ್ನು ಪಡೆಯಬಹುದು.

**ಮುಂದುವರೆಯುವುದು...**

# ಸಬರಮತಿ ಆಶ್ರಮಕ್ಕೆ ಮಾನ್ಯ ಮುಖ್ಯಮಂತ್ರಿಗಳ ಭೇಟಿ ಹಾಗೂ ಅಧ್ಯಯನ ಶಾಲೆ-2 ರ ಶಂಕುಸ್ಥಾಪನೆ



**ಶ್ರೀ ಪ್ರಕಾಶ ಎಸ್. ಮಾಚೇನಹಳ್ಳಿ**
ಉಪನ್ಯಾಸಕರು, ಆರ್.ಡಿ.ಪಿ.ಆರ್.
ಕಾರ್ಯಕ್ರಮ ಸಂಚಾಲಕರು
ಹಾಗೂ ಸಂಚಾಲಕರು,
ಸಬರಮತಿ ಆಶ್ರಮ, ಕೇಂದ್ರ
ಕ.ರಾ.ಗ್ರಾ. ಮತ್ತು ಪಂ. ರಾಜ್
ವಿಶ್ವವಿದ್ಯಾಲಯ, ಗದಗ



**ಡಾ. ಸಂಜಯಕುಮಾರ ಶಿ. ಹಾರೋಬಿಡಿ**
ಪ್ರಕಟಣಾ ಸಂಯೋಜಕರು,
ತರಬೇತಿ, ಪ್ರಕಟಣೆ ಹಾಗೂ
ಮೇಲ್ವಿಚಾರಣೆ ಕೇಂದ್ರ,
ಕ.ರಾ.ಗ್ರಾ. ಮತ್ತು ಪಂ. ರಾಜ್
ವಿಶ್ವವಿದ್ಯಾಲಯ, ಗದಗ

ಕನ್ನಡ ಭಾಷೆ ನಾಡು ನುಡಿಯ ವೈಶಿಷ್ಟ್ಯತೆಯನ್ನು ಬೆಳಗುವಂತೆ ಮಾಡಿದ ಘಟನೆಗೆ ಸಾಕ್ಷಿ ಎಂಬಂತೆ 2023ನೇ ವರ್ಷವು ಕನ್ನಡಿಗರ ಪಾಲಿಗೆ ಅಚ್ಚಳಿಯದೇ ಉಳಿದು ಬಿಡುವಂತದ್ದು. ಒಂದು ನಾಡಿನ ಅಸ್ತಿತ್ವವು ಆ ಪ್ರದೇಶದಲ್ಲಿ ಮಾತನಾಡುವ ಭಾಷೆಯ ಮೇಲೆ ಅವಲಂಬಿತವಾಗಿರುತ್ತದೆ. ಭಾಷೆ ಉಳಿದು ಬೆಳೆದು ಬರಲು ಅದು ಜನರ ಆಡು ಭಾಷೆಯಾಗಿ, ವ್ಯವಹಾರಿಕ ಭಾಷೆಯಾಗಿ ಹಾಗೂ ಬರವಣಿಗೆಯ ರೂಪದಲ್ಲಿ ಒಂದು ವ್ಯವಸ್ಥಿತ ರೀತಿಯಲ್ಲಿ ಬೆಳೆದು ಬರಬೇಕು. ಈ ಎಲ್ಲ ಹಂತಗಳನ್ನು ದಾಟಿ ಬಂದ ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ.

ಒಂದು ಪ್ರಬುದ್ಧ ಭಾಷೆಯಾಗಿ ಬೆಳೆದು ಬಂದ ಕನ್ನಡ ಭಾಷೆ ಮತ್ತು ಈ ಭಾಷೆಯನ್ನಾಡುವ ಜನರು ತಮ್ಮ ಅಸ್ಮಿತೆಯನ್ನು ಹುಡುಕಿಕೊಳ್ಳುವ ಸಂದರ್ಭವನ್ನು ಎದುರಿಸುವ ಸನ್ನಿವೇಶಗಳು ಸೃಷ್ಟಿಯಾಗಿದ್ದು ನಮ್ಮವರ ದುರ್ದೈವ ಎಂದೆನ್ನಬಹುದು. ಸಾವಿರಾರು ವರ್ಷಗಳ ಇತಿಹಾಸವಿರುವ ನಮ್ಮ ಭಾಷೆಗೆ ಪ್ರಾಶಸ್ತ್ಯ ಇಲ್ಲದ ಸಂದರ್ಭ ಎದುರಾಗುವ ಘಟನೆಗಳು ನಡೆದು ಹೋದವು. ಅದರಲ್ಲೂ ವಿಶೇಷವಾಗಿ ರಾಜ ಪ್ರಭುತ್ವ ಕಣ್ಮರೆಯಾಗಿ ವಿದೇಶಿಯರ ಆಗಮನದಿಂದ ಅನೇಕ ಮಾರ್ಪಾಡುಗಳಾದವು. ವಿಶೇಷವಾಗಿ ಆಂಗ್ಲರು ದಕ್ಷಿಣ ಭಾರತಕ್ಕೆ ಪ್ರವೇಶ ಮಾಡಿದ ಮೇಲೆ ಇಲ್ಲಿನ ಜನರನ್ನು ನಿಯಂತ್ರಣಕ್ಕೊಳಪಡಿಸಿ ತಮ್ಮ ಆಡಳಿತವನ್ನು ಸರಳವಾಗಿ ನಡೆಸಬೇಕೆಂಬ ಮಹದಾಸೆಯಿಂದ ಕನ್ನಡ ಭಾಷೆಯನ್ನಾಡುವ ಪ್ರದೇಶಗಳನ್ನು ಪ್ರಾಂತ್ಯಗಳನ್ನಾಗಿ ವಿಂಗಡಿಸಿದರು.

ಹೀಗೆ ಪ್ರಾಂತಗಳ ವಿಭಜನೆಯಿಂದ ಕನ್ನಡಿಗರು ಅನೇಕ ಕಡೆಗಳಲ್ಲಿ ಹಂಚಿ ಹೋದರು. ಅವರ ಆಶೋತ್ತರಗಳಿಗೆ ಬೆಲೆ ಇಲ್ಲದೆ ಹೋದಾಗ ಬಹುಭಾಷಿಕರು ಪ್ರತ್ಯೇಕ ರಾಜ್ಯ ನಿರ್ಮಿಸಿಕೊಳ್ಳುವ ಪ್ರಯತ್ನದಲ್ಲಿ ಯಶಸ್ವಿಯಾಗುತ್ತಾರೆ. ಅವರ ಅವಿರತ ಹೋರಾಟ, ಸಾಹಿತ್ಯಕ ಚಳುವಳಿಗಳ ಪರಿಣಾಮವಾಗಿ 1956 ರಲ್ಲಿ "ಮೈಸೂರು ರಾಜ್ಯ"



ಉದಯವಾಯಿತು. ಆದರೆ ಮೈಸೂರು ಎಂಬುದು ಪ್ರದೇಶ ವಾಚಿಯಾಗಿದ್ದ ಕಾರಣಕ್ಕೆ ಹಲವರ ಅಭಿಪ್ರಾಯ ''ಕರ್ನಾಟಕ'' ಎಂದು ಮರು ನಾಮಕರಣ ಮಾಡಬೇಕೆಂದಿತ್ತು. ಈ ಸದಾಶಯದೊಂದಿಗೆ ಹಲವು ಸಭೆಗಳು, ಹೋರಾಟಗಳು ನಡೆದವು.

"ಕರ್ನಾಟಕ" ನಾಮಕರಣ ಚಳುವಳಿ ಮತ್ತು ತಾಯಿ ಭುವನೇಶ್ವರಿಯ ಭಾವ ಚಿತ್ರದ ರೂಪಸಿದ್ಧಗೊಳ್ಳಲು ಪ್ರೇರಣೆಯಾಗಿದ್ದು ಗದಗ ಎಂಬುದು ಈ ಭಾಗದ ಜನರ ಹೆಮ್ಮೆಯ ವಿಷಯವಾಗಿದೆ. ಈ ಭಾಗದಲ್ಲಿ ಮುತ್ಸುದ್ದಿಯಾಗಿದ್ದ ದೊಡ್ಡ ಮೇಟಿ ಅಂದಾನಪ್ಪ ಅವರನ್ನು ಸ್ಮರಿಸಿಕೊಳ್ಳಲೇಬೇಕು. ಅವರು ಈ ಭಾಗದಿಂದ ಆಯ್ಕೆಗೊಂಡು ಮುಂಬೈ ಪ್ರಾತ್ಯದಲ್ಲಿ ವಿಧಾನ ಸಭೆಯಲ್ಲಿ ಕನ್ನಡದಲ್ಲಿ ಮಾತನಾಡಿ ನಮ್ಮ ಮಾತೃ ಭಾಷೆಯ ಮಹತ್ವವನ್ನು ಎತ್ತಿ ಹಿಡಿದರು. ಮೈಸೂರು ರಾಜ್ಯಕ್ಕೆ "ಕರ್ನಾಟಕ" ಎಂದು ನಾಮಕರಣ ಮಾಡಲೇಬೇಕು ಎಂದು ಸಾರಿ ಸಾರಿ ಹೇಳಿದ ಅಪ್ಪಟ ಕನ್ನಡಾಭಿಮಾನಿ. ಇವರ ಜೊತೆಗೆ ನೂರಾರು ಜನ ಸಾಹಿತಿಗಳು ಸಾಹಿತ್ಯ ರಚಿಸಿ ಜನ ಮಾನಸದಲ್ಲಿ ಕನ್ನಡದ ಕಂಪನ್ನು ಬಿತ್ತಿದರು. ಪತ್ರ ಚಳುವಳಿಯ ಮೂಲಕ ಜನಪ್ರತಿನಿಧಿಗಳನ್ನು ಜಾಗೃತಗೊಳಿಸಿದರು.

ಒಂದು ರೀತಿಯಲ್ಲಿ ಗದಗ ನಾಡು ಸಾಹಿತ್ಯ ಮತ್ತು ಭಾಷೆಯ ಪ್ರೌಢಿಮೆ ದೃಷ್ಟಿಯಿಂದ ಮೌಲ್ಯಯುತವಾದ ಕೊಡುಗೆಯನ್ನು ನೀಡಿದ್ದು ಐತಿಹಾಸಿಕ ಘಟನೆ. 1956 ರಲ್ಲಿ ನಾಮಕರಣಗೊಂಡ ಮೈಸೂರು ರಾಜ್ಯಕ್ಕೆ ಮೊತ್ತ ಮೊದಲ ಬಾರಿಗೆ ಡಿ ದೇವರಾಜ ಅರಸು ಅವರು 1973ರಲ್ಲಿ "ಕರ್ನಾಟಕ" ಎಂದು ಮರು ನಾಮಕರಣ ಮಾಡಿದ ಕರ್ನಾಟಕ ರಾಜ್ಯದ ಮೊದಲ ಮುಖ್ಯಮಂತ್ರಿ. ಈ ಸಂಭ್ರಮದ ಜ್ಯೋತಿ ಹಂಪಿಯ ವಿರೂಪಾಕ್ಷ ಮಂದಿರದ ಮುಂದೆ ಪ್ರಜ್ವಲಿಸಿ, ಅದು ಗದಗ ನಗರಕ್ಕೂ ಪ್ರವೇಶ ಪಡೆಯುತ್ತದೆ. ಬಹುಶ: ಕನ್ನಡ ಭಾಷೆಯ ಬೆಳಗನ್ನು ಪ್ರಜ್ವಲಿಸುವಂತೆ ಮಾಡಿದ ಪ್ರಯತ್ನ ಎಂಬಂತೆ ಈ ಘಟನೆಯ ಸ್ಮರಣಾರ್ಥ ಗದಗ ಜಿಲ್ಲೆಯಾದ್ಯಂತ ಮೂರು ದಿನಗಳ "ಸುವರ್ಣ ಸಂಭ್ರಮ–50" ಎಂಬ ಹೆಸರಿನಲ್ಲಿ ನಮ್ಮ ನಾಡಿನ ಕಲೆ ಮತ್ತು ಸಂಸ್ಕೃತಿಯನ್ನು ಬಿಂಬಿಸುವ ಸಂಗೀತ ಮತ್ತು ನೃತ್ಯ ಕಾರ್ಯಕ್ರಮಗಳು ಜನರ ಮನಸೂರೆ ಗೊಂಡು ಪ್ರತಿಯೊಬ್ಬರ ಮನಸ್ಸಿನಲ್ಲಿ ಅಚ್ಚಳಿಯದಂತೆ ಉಳಿಯುವಂತಾಯಿತು.

ಈ ನಗರದಲ್ಲಿರುವ ಪುರಾತನ ಕಾಲದ ದೇವಾಲಯಗಳು, ಬೀದಿಗಳು ದೀಪಾಲಂಕಾರದಿಂದ ಸಂಭ್ರಮ ಎಲ್ಲರ ಮನಸೂರೆಗೊಂಡಿತು. ಇಂತಹ ಐತಿಹಾಸಿಕ ಸಂಭ್ರಮವನ್ನು ಆಚರಿಸಲು ಮಾನ್ಯ ಮುಖ್ಯ ಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ಉಪಸ್ಥಿತರಿದ್ದು, ಕನ್ನಡ ಭಾಷೆಯ ಮೇಲಿನ ತಮ್ಮ ಅಭಿಮಾನ ಮತ್ತು ಗೌರವದ ದ್ಯೋತಕ ಎಂಬಂತೆ ಈ ಭಾಗದ ಕವಿ ಮನಸ್ಸುಗಳ ಚೇತನಕ್ಕೆ ಪ್ರೇರಣೆ ನೀಡುವಕಾರ್ಯವಾಗಿದ್ದು ಸತ್ಯದ ಸಂಗತಿಯಾಗಿದೆ.

ಈ ಸುವರ್ಣ ಸಂಭ್ರಮದ ಮೂರನೆಯ ದಿನದಂದು ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ಅವರು ಹಾಗೂ ಉಪ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಡಿ. ಕೆ. ಶಿವಕುಮಾರ ಅವರು ಹಾಗೂ ಸರ್ಕಾರದ ಅನೇಕ ಗೌರವಾನ್ವಿತ ಸಚಿವರುಗಳು ಆಗಮಿಸಿದ್ದು ಸಂಭ್ರಮಕ್ಕೆ ಮತ್ತಷ್ಟು ಮೆರಗನ್ನು ನೀಡಿತು.

ಇಂತಹ ಐತಿಹಾಸಿಕ ಜಿಲ್ಲೆಯಲ್ಲಿ 2016 ರಂದು ಸ್ಥಾಪನೆಗೊಂಡಿರುವ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು ಮಹಾತ್ಮ ಗಾಂಧೀಜಿಯವರ ತತ್ವ, ಚಿಂತನೆ ಮತ್ತು ಆದರ್ಶಗಳ ಅಡಿಯಲ್ಲಿ ಸಮಗ್ರ ಗ್ರಾಮೀಣಾಭಿವೃದ್ಧಿಗೆ ಪೂರಕವಾದಂತಹ ಅನೇಕ ಕಾರ್ಯಯೋಜನೆಗಳನ್ನು ರೂಪಿಸಿ, ಅವುಗಳ ಕಾರ್ಯ ಅನುಷ್ಠಾನ ಮತ್ತು ಪ್ರತಿಫಲ ಕುರಿತಂತೆ ವ್ಯವಸ್ಥಿತ ಶ್ರಮವನ್ನು ವಹಿಸುತ್ತಿದೆ. ವಿಶ್ವವಿದ್ಯಾಲಯವು ಕಳೆದ 6 ವರ್ಷಗಳಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಸಿದೆ.

ಮಹಾತ್ಮ ಗಾಂಧೀಜಿಯವರ ಗ್ರಾಮ ಸ್ವರಾಜ್ ಕನಸನ್ನು ಸಕಾರಗೊಳಿಸುವ ನಿಟ್ಟಿನಲ್ಲಿ ಕಾರ್ಯ ಸಾಧನೆಯನ್ನು ಮಾಡುತ್ತಾ ಬಂದಿದೆ. ಹಾಗೂ ಶೈಕ್ಷಣಿಕ ಮತ್ತು ಸಾಮಾಜಿಕ ವಲಯಗಳಲ್ಲಿ ಪ್ರಸಂಶೆಗೆ ಪಾತ್ರವಾಗಿದೆ. ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳು ಸೇರಿ 1100ಕ್ಕೂ ಅಧಿಕ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ. ಗ್ರಾಮೀಣ ಜೀವನೋಪಾಯಕ್ಕೆ ಪೂರಕವಾದ ಅನೇಕ ಚಟುವಟಿಕೆಗಳನ್ನು ವಿಶ್ವವಿದ್ಯಾಲಯವು ನಿರ್ವಹಿಸುತ್ತಿದೆ. "ಗ್ರಾಮೀಣ ಪರಿವರ್ತನೆ" ವಿಶ್ವವಿದ್ಯಾಲಯದ ಸಂಕಲ್ಪವಾಗಿದೆ. ಇದಕ್ಕೆ ಪೇರಣಾ ಕೇಂದ್ರವನ್ನಾಗಿ ವಿಶ್ವವಿದ್ಯಾಲಯದ ಆವರಣದಲ್ಲಿ ಗಾಂಧಿ ಸಬರಮತಿ ಆಶ್ರಮವನ್ನು ನಿರ್ಮಿಸಲಾಗಿದೆ. ಗುಜರಾತಿನ ಅಹಮದಾಬಾದ್ ನಲ್ಲಿರುವ ಸಬರಮತಿ ಆಶ್ರಮದ ಪ್ರತಿಕೃತಿಯಾದ ಈ ಆಶ್ರಮವನ್ನು ನವೆಂಬರ್ 11, 2020 ರಂದು ಲೋಕಾರ್ಪಣೆಗೊಳಿಸಲಾಗಿದೆ. ಇದು

ವಿಶ್ವವಿದ್ಯಾಲಯದ ಪ್ರಮುಖ ಆಕರ್ಷಣೆಯ ಹಾಗೂ ಪ್ರೇಕ್ಷಣೀಯ ಸ್ಥಳವಾಗಿದೆ.

ಈ ವಿಶ್ವವಿದ್ಯಾಲಯಕ್ಕೆ ಪ್ರಸ್ತುತ ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ಅವರೇ 2016ರಲ್ಲಿ ಅನುಮೋದನೆಯನ್ನು ನೀಡಿದ್ದರು. ಈಗಿನ ಕಾನೂನು ಮತ್ತು ಪ್ರವಾಸೋದ್ಯಮ ಸಚಿವರಾದ ಸನ್ಮಾನ್ಯ ಶ್ರೀ ಡಾ. ಎಚ್. ಕೆ. ಪಾಟೀಲ ಅವರು ಈ ವಿಶ್ವವಿದ್ಯಾಲಯದ ಸ್ಥಾಪನೆಯ ಕನಸನ್ನು ಕಂಡಿದ್ದರು.

## ಮಾನ್ಯ ಮುಖ್ಯಮಂತ್ರಿಗಳ ಸಬರಮತಿ ಆಶ್ರಮದ ವೀಕ್ಷಣೆ:

ಮಹಾತ್ಮಾ ಗಾಂಧೀಜಿಯವರ ತತ್ವ ಚಿಂತನೆ, ಆದರ್ಶಗಳ ಆಧಾರಿತವಾದ ಶೈಕ್ಷಣಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ಕೈಗೊಳ್ಳುವ ಮತ್ತು ಅವುಗಳನ್ನು ವಿದ್ಯಾರ್ಥಿ, ಯುವ ಪೀಳಿಗೆಯಲ್ಲಿ ರೂಢಿಸುವ ಧ್ಯೇಯೋದ್ದೇಶದೊಂದಿಗೆ ಕಾರ್ಯವನ್ನು ನಿರ್ವಹಿಸುತ್ತಿರುವ ವಿಶ್ವವಿದ್ಯಾಲಯದ ಗಾಂಧಿ ಸಬರಮತಿ ಆಶ್ರಮವನ್ನು ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ಅವರು ಸಂದರ್ಶಿಸಿ ಮಹಾತ್ಮಗಾಂಧಿ ಪ್ರತಿಮೆಗೆ ಪುಷ್ಪ ನಮನವನ್ನು ಸಲ್ಲಿಸಿ ಆಶ್ರಮವನ್ನು ವೀಕ್ಷಿಸಿದರು.



ಈ ಸಂದರ್ಭದಲ್ಲಿ ಉಪಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಡಿ. ಕೆ. ಶಿವಕುಮಾರ ಅವರು, ವಿಧಾನ ಪರಿಷತ್ ಸಭಾಪತಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಹೊರಟ್ಟಿ, ಸನ್ಮಾನ್ಯ ಶ್ರೀ ರುದ್ರಪ್ಪ ಲಮಾಣಿ, ಸಂಸದೀಯ ವ್ಯವಹಾರ, ಕಾನೂನು ಮತ್ತು ಪ್ರವಾಸೋದ್ಯಮ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಶ್ರೀ ಎಚ್. ಕೆ. ಪಾಟೀಲ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಸನ್ಮಾನ್ಯ ಶ್ರೀ ಶಿವರಾಜ ತಂಗಡಗಿ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವರಾದ ಸನ್ಮಾನ್ಯ ಶ್ರೀ ಕೆ. ಎಚ್. ಮುನಿಯಪ್ಪ, ಮಹಿಳಾ ಮತ್ತು ಮಕ್ಕಳ ಇಲಾಖೆಯ ಸಚಿವರಾದ ಶ್ರೀಮತಿ ಲಕ್ಷ್ಮಿ ಹೆಬ್ಬಾಳಕರ, ವೈದ್ಯಕೀಯ ಶಿಕ್ಷಣ, ಕೌಶಲ್ಯಅಭಿವೃದ್ಧಿ ಮತ್ತು ಉದ್ಯಮಶೀಲತೆ ಇಲಾಖೆಯ ಸಚಿವರಾದ ಸನ್ಮಾನ್ಯ ಶ್ರೀ ಡಾ. ಶರಣಪ್ರಕಾಶ ಪಾಟೀಲ, ನಗರಾಭಿವೃದ್ಧಿ ಸಚಿವರಾದ ಸನ್ಮಾನ್ಯ ಶ್ರೀ ಭೈರತಿ ಸುರೇಶ, ಶಾಸಕರಾದ ಶ್ರೀ ಜಿ.ಎಸ್. ಪಾಟೀಲ, ಶ್ರೀ ಶ್ರೀನಿವಾಸ ಮಾನೆ, ಶ್ರೀ ಜೆ.ಟಿ. ಪಾಟೀಲ ಮಾಜಿ ಶಾಸಕರಾದ ಶ್ರೀ ಡಿ.ಆರ್. ಪಾಟೀಲ, ಶ್ರೀಮತಿ ಉಮಾಮಹದೇವನ್, ಅಪರ ಮುಖ್ಯಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ, ಕರ್ನಾಟಕ ಸರ್ಕಾರ, ಗದಗ ಜಿಲ್ಲಾಧಿಕಾರಿಗಳಾದ ಶ್ರೀಮತಿ ವೈಶಾಲಿ ಎಂ.ಎಲ್. ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ, ಕುಲಸಚಿವರಾದ ಪ್ರೊ.ಬಸವರಾಜ ಎಲ್. ಲಕ್ಕಣ್ಣವರ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ನೇಮಗೌಡ ಅವರು ಸೇರಿ ಹಲವರು ಗಣ್ಯರು ಇದ್ದರು.

ಮುಖ್ಯ ಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ಅವರು ಆಶ್ರಮದ ಗಾಂಧಿ ಪ್ರತಿಮೆಗೆ ಪುಷ್ಪ ನಮನವನ್ನು ಸಲ್ಲಿಸುತ್ತಿರುವುದು. ಉಪ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರ, ಹಾಗೂ ಇತರಗಣ್ಯರು ಉಪಸ್ಥಿತರಿರುವುದು.

ಮಾನ್ಯ ಮುಖ್ಯಮಂತ್ರಿಗಳು ವಿಶ್ವವಿದ್ಯಾಲಯ ಮತ್ತು ವಿಶ್ವವಿದ್ಯಾಲಯದ ಸಬರಮತಿ ಆಶ್ರಮವು ರಮಣೀಯ ಪರಿಸರದಲ್ಲಿ ನಿರ್ಮಾಣಗೊಂಡಿರುವುದನ್ನು ನೋಡಿ ಸಂತಸ ಪಟ್ಟರು. “ನೈಜವಾದ ಗ್ರಾಮೀಣ ಚಿತ್ರಣ ಇಲ್ಲಿ ಮೂಡಿ ಬಂದಿದೆ. ಮುಂದಿನ ಕಾರ್ಯಸಾಧನೆ ಮತ್ತು ಯಶಸ್ಸಿಗೆ ಶುಭಕೋರುತ್ತೇನೆ” ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ಆಶ್ರಮದ ಸಂದರ್ಶಕರ ಪುಸ್ತಕದಲ್ಲಿ ದಾಖಲಿಸಿದ್ದಾರೆ.



ಮುಖ್ಯ ಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ಅವರು ಮತ್ತು ಉಪ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರ ಹಾಗೂ ಸನ್ಮಾನ್ಯಶ್ರೀ ಡಾ. ಎಚ್. ಕೆ. ಪಾಟೀಲರು ಸಬರಮತಿ ಆಶ್ರಮಕ್ಕೆ ಭೇಡಿ ನೀಡಿದ ಸ್ಮರಣಾರ್ಥವಾಗಿ ಆಶ್ರಮದ ಆವರಣದಲ್ಲಿ ಸಸಿ ನೆಡುತ್ತಿರುವುದು ಹಾಗೂ ಇತರ ಪ್ರಮುಖ ಗಣ್ಯರು ಉಪಸ್ಥಿತರಿರುವುದು.

### ವಿಶ್ವವಿದ್ಯಾಲಯ ಬೇಟಿ ಸ್ಮರಣಾರ್ಥವಾಗಿ ಸಸಿ ನೆಟ್ಟರು :

ಐತಿಹಾಸಿಕ ಪ್ರತಿಕೃತಿ ಸಬರಮತಿ ಆಶ್ರಮಕ್ಕೆ ಭೇಟಿ ನೀಡಿದ ಸ್ಮರಣಾರ್ಥವಾಗಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳು ಸಬರಮತಿ ಆಶ್ರಮದ ಉದ್ಯಾನವನದ ಆವರಣದಲ್ಲಿ ಸಸಿಯನ್ನು ನೆಟ್ಟರು. ಈ ಸುಂದರ ಮತ್ತು ಐತಿಹಾಸಿಕ ಕ್ಷಣಕ್ಕೆ ಆಶ್ರಮಕ್ಕೆ ಆಗಮಿಸಿದ್ದ ಗೌರವಾನ್ವಿತ ಸಚಿವರುಗಳು, ಶಾಸಕರು ಹಾಗೂ ಇಲ್ಲಿ ನೆರದಿದ್ದ ಅನೇಕ ಗಣ್ಯರು ಸಾಕ್ಷಿಯಾದರು.

### ಅಧ್ಯಯನ ಶಾಲೆ–2 ರ ಶಂಕುಸ್ಥಾಪನೆ :

ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ಅವರು ವಿಶ್ವವಿದ್ಯಾಲಯದಲ್ಲಿ ಸುಮಾರು 10830 ಚದರ ಅಡಿಯ ವಿಸ್ತೀರ್ಣದಲ್ಲಿ ಹಾಗೂ ಅಂದಾಜು 5ಕೋಟಿ ರೂಪಾಯಿಗಳ ವೆಚ್ಚದ ಮೊತ್ತದಲ್ಲಿ ನಿರ್ಮಾಣವಾಗಲಿರುವ ಅಧ್ಯಯನ ಶಾಲೆ–2ರ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಈ ಸಂಧರ್ಭದಲ್ಲಿ ಉಪ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಡಿ. ಕೆ. ಶಿವಕುಮಾರ, ಗೌರವಾನ್ವಿತ ಸಚಿವರುಗಳು ಮತ್ತು ಗಣ್ಯಮಾನ್ಯರುಗಳು ಈ ಶಂಕುಸ್ಥಾಪನೆ ಕಾರ್ಯಕ್ಕೆ ಕೈಜೋಡಿಸಿದರು.

### ಗಮನ ಸಳೆದ ಸಬರಮತಿ ಆಶ್ರಮದ ಸ್ತಬ್ಧಚಿತ್ರ :

ಕರ್ನಾಟಕ ಸಂಭ್ರಮ–50ರ ಹಿನ್ನೆಲೆಯಲ್ಲಿ ಆಯೋಜಿಸಲಾಗಿದ್ದ ಅದ್ಧೂರಿ ಮೆರವಣಿಗೆಯಲ್ಲಿ ಮೈಸೂರು ದಸರಾದ ಜಂಬೂ ಸವಾರಿಯಲ್ಲಿ ಪ್ರದರ್ಶನಗೊಂಡ ವಿಶ್ವವಿದ್ಯಾಲಯದ ಸಬರಮತಿ ಆಶ್ರಮದ ಸ್ತಬ್ಧ ಚಿತ್ರವು ನಗರದ ಜನರ ಗಮನವನ್ನು ಸೆಳೆಯಿತು. ವಿಶ್ವವಿದ್ಯಾಲಯದ ಉಪನ್ಯಾಸಕರಾದ ಶ್ರೀ ಅಭಿಷೇಕ ಎಚ್. ಈ. ಅವರ ನೇತೃತ್ವದಲ್ಲಿ ಗಾಂಧಿ ಮತ್ತು ಕಸ್ತೂರಬಾ ಅವರ ವೇಷದಾರಿಯಲ್ಲಿ ವಿಶ್ವವಿದ್ಯಾಲಯದ 25ಕ್ಕೂ ಹೆಚಿನ ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಕರ್ನಾಟಕ ಸಂಭ್ರಮ ಮೆರವಣಿಗೆ



ಕರ್ನಾಟಕ "ಸುವರ್ಣಸಂಭ್ರಮ–50" ಗದಗದಲ್ಲಿ ಜರುಗಿದ ಮೆರವಣಿಗೆಯಲ್ಲಿ ಪ್ರದರ್ಶನಗೊಂಡ ವಿಶ್ವವಿದ್ಯಾಲಯದ ಸಬರಮತಿ ಆಶ್ರಮದ ಸ್ತಬ್ಧಚಿತ್ರ

ಕಾರ್ಯಕ್ರಮಕ್ಕೆ ಆಶ್ರಮದ ಸ್ತಬ್ಧಚಿತ್ರವು ಗತವೈಭವವನ್ನು ನೆನಪಿಸುವಂತೆ ಭಾಸವಾಗುತ್ತಿತ್ತು.

### ಪತ್ರಿಕಾ ಗೋಷ್ಠಿಯಲ್ಲಿ ಭಾಗಿ ಹಾಗೂ ಜನರ ಅಹವಾಲುಗಳಿಗೆ ಸ್ಪಂದನೆ :

ವಿಶ್ವವಿದ್ಯಾಲಯದ ಅಧ್ಯಯನ ಶಾಲೆ–2 ಶಂಕು ಸ್ಥಾಪನೆಯನ್ನು ನೆರವೇರಿಸಿದ ನಂತರ ಮಾನ್ಯ ಮುಖ್ಯಮಂತ್ರಿಗಳು ವಿಶ್ವವಿದ್ಯಾಯಲದ ಕೌಶಲ್ಯ ವಿಕಾಸ ಭವನದಲ್ಲಿ ಆಯೋಜನೆಗೊಂಡಿದ್ದ ಪ್ರತಿಕಾಗೋಷ್ಠಿಯಲ್ಲಿ ಭಾಗಿಯಾದರು ಹಾಗೂ ಇವರ ಆಗಮನದ ಹಿನ್ನಲೆಯಲ್ಲಿ ಸೇರಿದ್ದ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಿ, ಅವರಿಗೆ ಸ್ಪಂದಿಸಿದರು. ವಿಶ್ವವಿದ್ಯಾಲಯದಲ್ಲಿ 2 ಗಂಟೆಗೂ ಅಧಿಕ ಸಮಯವನ್ನು ಕಳೆದ ಮಾನ್ಯ ಮುಖ್ಯಮಂತ್ರಿಗಳು, ಹಾಗೂ ಗೌರವಾನ್ವಿತ ಸಚಿವರುಗಳು ವಿಶ್ವವಿದ್ಯಾಲಯದ ಸುಂದರ ವಾತಾವರಣ ಹಾಗೂ ಕಾರ್ಯ ಚಟುವಟಿಕೆಗಳನ್ನು ಕಂಡು ಪ್ರಸಂಶೆಯನ್ನು ವ್ಯಕ್ತಪಡಿಸಿದರು. ನಂತದಲ್ಲಿ ಜಿಲ್ಲಾ ಪೋಲಿಸ್ ವೃಂದ ಹಾಗೂ ವಿಶ್ವವಿದ್ಯಾಲಯದ ಕುಲಪತಿಗಳು ಮಾನ್ಯ ಮುಖ್ಯಮಂತ್ರಿಗಳನ್ನು ಬೀಳ್ಕೊಟ್ಟರು.

"ಕರ್ನಾಟಕ" ಎಂದು ನಾಮಕರಣದ ಸುವರ್ಣ ಸಂಭ್ರಮದ ಸಂದರ್ಭದಲ್ಲಿ ವಿಶ್ವವಿದ್ಯಾಲಯ ಹಾಗೂ ವಿಶ್ವವಿದ್ಯಾಲಯದ ಸಬರಮತಿ ಆಶ್ರಮಕ್ಕೆ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳ ಭೇಟಿಯು ವಿಶ್ವವಿದ್ಯಾಲಯದ ಇತಿಹಾಸದಲ್ಲಿ ಅವಿಸ್ಮರಣೀಯವಾಗಿ ಉಳಿಯಲಿದೆ ಎಂದು ವಿಶ್ವವಿದ್ಯಾಲಯದ ಕುಲಪತಿಗಳು, ಕುಲಸಚಿವರು, ಅಧಿಕಾರಿ ವೃಂದದವರು ಹಾಗೂ ಪ್ರಾಧ್ಯಾಪಕರುಗಳು ಸೇರಿದ ವಿದ್ಯಾರ್ಥಿಗಳು ಹರ್ಷವನ್ನು ವ್ಯಕ್ತಪಡಿಸಿದರು.

ಮಾನ್ಯ ಮುಖ್ಯಮಂತ್ರಿಗಳ ವಿಶ್ವವಿದ್ಯಾಲಯದ ಸಂದರ್ಶನವು ಶೈಕ್ಷಣಿಕ ಕ್ಷೇತ್ರದಲ್ಲಿ ವಿಶ್ವವಿದ್ಯಾಲಯದ ಕಾರ್ಯವ್ಯಾಪ್ತಿ ದ್ವಿಗುಣಗೊಳ್ಳಲು ಸಾಧ್ಯವಾಗುತ್ತದೆ. ಈ ಭಾಗದ ಸರ್ವರ ಶೈಕ್ಷಣಿಕ ಶ್ರೇಭಿವೃದ್ಧಿಗೆ ಶ್ರಮಿಸುವ ನಿಟ್ಟಿನಲ್ಲಿ ಹೆಚ್ಚಿನ ಪಾತ್ರವನ್ನು ನಿರ್ವಹಿಸುತ್ತದೆ. ಗ್ರಾಮೀಣ ಭಾಗದ ಕೃಷಿ ಕುಟುಂಬಗಳು ಸ್ವಯಂ ಆರ್ಥಿಕ ಸ್ವಾವಲಂಬನೆ ಸಾಧಿಸುವ ದಿಶೆಯಲ್ಲಿ ನಮ್ಮ ವಿಶ್ವವಿದ್ಯಾಲಯ ಅನೇಕ ಕ್ರಿಯಾತ್ಮಕ ಚಟುವಟಿಕೆಗಳನ್ನು ಕೈಗೊಂಡು ಇಡೀದೇಶದಲ್ಲಿ ಮಾದರಿ ವಿಶ್ವವಿದ್ಯಾಲಯವಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ.

***

# NAIPUNYA KENDRA - PLACEMENT CELL

## Unnati : Campus Placement Drive, held on 06th October 2023



**Dr. Shashikant D.H.**
Placement Officer and
Faculty of Commerce,
KSRDPR University, Gadag



**Dr. Chandana V.**
Asst. Placement Officer
KSRDPR University, Gadag

The placement cell urges on the need of current market requirements and focuses in the development of their skill sets. Considering the need of the hour, the Cell has developed the courses on Life Skills for the beginners and Job Skills for the outgoing Students. Special lectures under Job Skills are being conducted for the fourth semester post graduate students for the academic year 2022-2023.

We conducted the placement sessions on job skills as well as life skills under the following topics for the better approach of the students during their selection process. On the day of placement class aptitude tests were conducted on the topics like Logical Reasoning, Aptitude, English Language – Communication, General Knowledge/ Current Affairs, Mathematics – DI and the answers and the reasoning were discussed on the same date. Life skills sessions were conducted for the second Semester post graduate students. Trends in Employment Scenario, Stress Management, Communication Skills, Group Discussion, Motivational Talk, Interpersonal Skills, Employability Skills were the topics which were included.

Job skills sessions were conducted for the fourth Semester post graduate students.Resume Presentation, Employability Quotient, Communication Skills & Etiquette, Interview Skills, Group Discussion,



Mock Interviewwere the topics which were included.

Campus Placement Drive for the academic year 2022-23 was organized on 6th October at Koushalya Vikasa Bhavan, Karnataka State Rural Development and Panchayat Raj University, Gadag. This was one of the most important and ambitious steps the University took, facilitating the placement assistance for the students of the University.

Deshpande Foundation, Niva Bupa Insurance, Stack Edu Tech, Deshpande Skilling, Prannarth Career Development, Future Greens, Quess. Hcl Techbee, Scodwes, Vikas Bank, Adyapragnya, Aerial Geomatics, Muthoot Microfinance, Allsec, Akshay Patra, Elena, Soukhyada, Nvk's Infotech are the organizations/ companies participated in the Unnati Campus Placement Drive – 2023. These companies conducted aptitude tests, group discussion, technical assessment and personal interview as a mode of selection process.

Total of 186 students of all the ten programs of the University have registered for the Drive, out of which 81 students have received their offer letters and 58 of the students were shortlisted in multiple companies for the next round of the selection procedures and many of the students were shortlisted and selected in multiple companies.Few organizations provided the offer letters on the day of the drive.The average pay for the selected students is around 1.5 lakh to 3.6 lakh per annum.

***





# ನಾನು ಕಂಡಂತೆ ವಿಶ್ವವಿದ್ಯಾಲಯ

ನಾನು ಕಂಡ ವಿಶ್ವವಿದ್ಯಾಲಯ
ನಾನಾ ತರಹ ವಿಷಯದ ವಿದ್ಯಾಲಯ
ನಾಗಾವಿ ಗ್ರಾಮದ ಬಯಲಲ್ಲಿ
ನಾನಾ ರೀತಿಯ ಸಿರಿಧಾನ್ಯವ
ಬೆಳೆದ ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯದಲ್ಲಿ ವಿವಿಧ ರೀತಿಯ ತರಬೇತಿಯಲ್ಲಿ
ವಿಷಯಾನುಸಾರ ತರಬೇತುದಾರರು ಇಲ್ಲಿ
ಬೆಳಗಿನ ಸ್ವಚ್ಛಂದ ವಾತಾವರಣದಲ್ಲಿ
ಯೋಗಾ ಯೋಗವಾಗಿ ಬೆಳಕಾಗಿ ಬಂದ
ಯೋಗಾಸನ ಇಲ್ಲಿ

ಬಗೆ ಬಗೆ ಆಸನವನ್ನು ಬೋಧಕರು ಹೇಳಿದರಿಲ್ಲಿ
ಐದೇ ಐದು ದಿನದಲ್ಲಿ ಅರಿವು ಕೇಂದ್ರದ ಮೇಲ್ವಿಚಾರಕರಿಗೆ
ವಿವಿಧ ಬಗೆಯ ಜ್ಞಾನ ಮತ್ತು ಬಾನವನ್ನು ನೀಡಿದರಿಲ್ಲಿ

– ಶ್ರೀ ಚನ್ನಪ್ಪ ಡಿ. ಶಾಂತಪ್ಪನವರ
ಗ್ರಾಮ ಪಂಚಾಯತ್
ಅರಿವು ಗ್ರಂಥಾಲಯ, ಸಹಾಯಕರು,
ಚಿಕ್ಕಮಣ್ಣೂರು ತಾ॥ ರೋಣ ಜಿ॥ ಗದಗ

# ಕ್ರೀಡೋತ್ಸವ–2023



**ಡಾ. ವೀರೇಶಕುಮಾರ ಬಿ. ವಿಜಾಪುರ**
ಸಹಾಯಕ ನಿರ್ದೇಶಕರು,
ದೈಹಿಕ ಶಿಕ್ಷಣ ಮತ್ತು ಕ್ರೀಡೆ
ಕ.ರಾ.ಗ್ರಾ. ಮತ್ತು ಪಂ. ರಾಜ್
ವಿಶ್ವವಿದ್ಯಾಲಯ, ಗದಗ

ಕ್ರೀಡೆಗಳು ಪ್ರತಿಯೊಬ್ಬ ಮನುಷ್ಯನ ಜೀವನಕ್ಕೆ ಬಹಳ ಅವಶ್ಯಕವಾಗಿದ್ದು ಕ್ರೀಡೆ ಅವರನ್ನು ಸದೃಢವಾಗಿ ಮತ್ತು ಉತ್ತಮ ದೈಹಿಕ ಶಕ್ತಿಯುತರನ್ನಾಗಿರಿಸುತ್ತದೆ. ಜೀವನದ ಪ್ರತಿಯೊಂದು ಹಂತದಲ್ಲೂ ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಇದು ಜನರ ವ್ಯಕ್ತಿತ್ವವನ್ನೂ ಸುಧಾರಿಸುತ್ತದೆ. ಕ್ರೀಡೆಗಳು ನಮ್ಮ ಎಲ್ಲಾ ಅಂಗಗಳನ್ನು ಎಚ್ಚರವಾಗಿರಿಸುತ್ತದೆ ಮತ್ತು ನಿಯಮಿತವಾಗಿ ಕೆಲವು ರೀತಿಯ ಕ್ರೀಡೆಗಳನ್ನು ಆಡುವ ಮೂಲಕ ನಮ್ಮ ಹೃದಯದ ರಕ್ತ ನಾಳಗಳು ಬಲಗೊಳ್ಳುತ್ತವೆ. ಹಿಂದಿನಿಂದಲೂ ಕ್ರೀಡೆಗೆ ಯಾವಾಗಲೂ ಆದ್ಯತೆ ನೀಡಲಾಗಿದ್ದು, ಇತ್ತೀಚಿನ ದಿನಗಳಲ್ಲಿ ಇದು ಹೆಚ್ಚು ಆಕರ್ಷಕವಾಗಿದೆ. ಪ್ರತಿವರ್ಷ ಏಪ್ರಿಲ್ 6 ರಂದು "ವಿಶ್ವ ಕ್ರೀಡಾ ದಿನ"ವನ್ನು ಆಚರಿಸಲಾಗುತ್ತದೆ.

ಕ್ರೀಡೆಯು ಮಾನವ ಜೀವನದ ಅವಿಭಾಜ್ಯ ಅಂಗವಾಗಿದೆ. ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಕ್ರೀಡೆಗೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಇದಲ್ಲದೆ, ಕ್ರೀಡೆಗಳು ವ್ಯಕ್ತಿಯ ವ್ಯಕ್ತಿತ್ವವನ್ನು ನಿರ್ಮಿಸಲು ಸಹಾಯ ಮಾಡುತ್ತದೆ. ಇದು ಖಂಡಿತವಾಗಿಯೂ ದೇಹವನ್ನು ದೈಹಿಕವಾಗಿ ಸದೃಢವಾಗಿಡಲು ಅತ್ಯುತ್ತಮ ಸಾಧನವಾಗಿದೆ. ದೈಹಿಕ ಚಟುವಟಿಕೆಗಳಲ್ಲಿ ತೊಡಗಿರುವ ಮಕ್ಕಳು ಪರಸ್ಪರ ಗೌರವ ಮತ್ತು ಸಹಕಾರದ ಉತ್ತಮ ಮೌಲ್ಯಗಳನ್ನು ಉಳಿಸಿಕೊಳ್ಳುತ್ತಾರೆ. ಕ್ರೀಡೆಗಳನ್ನು ಆಡುವುದು ಚಿಕ್ಕವರಿಂದ ವಯೋವೃದ್ಧರ ಜವಾಬ್ದಾರಿಯು ಆಗಿದೆ. ನಾಯಕತ್ವ, ಜವಾಬ್ದಾರಿ ಮತ್ತು ಆತ್ಮವಿಶ್ವಾಸದಿಂದ ಕೆಲಸ ಮಾಡುವ ಕೌಶಲ್ಯಗಳನ್ನು ಕಲಿಸುತ್ತದೆ.

## ವಿದ್ಯಾರ್ಥಿ ಜೀವನದಲ್ಲಿ ಕ್ರೀಡೆಯ ಮಹತ್ವ

ದೇಹವನ್ನು ಪೋಷಿಸಲು ಆರೋಗ್ಯಕರ ಪೋಷಕಾಂಶಗಳ ಆಹಾರದ ಅಗತ್ಯವಿರುವಂತೆ, ಕ್ರೀಡೆಗಳನ್ನು ಆಡುವುದು ವಿಶೇಷವಾಗಿ ಬೆಳೆಯುವ ಮಕ್ಕಳಿಗೆ ಮಹತ್ವದ್ದಾಗಿದೆ. ಒಬ್ಬ ವಿದ್ಯಾರ್ಥಿಯಾಗಿ, ಅನೇಕ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಕ್ರೀಡೆಗಳು ಪರೀಕ್ಷೆಯ ಒತ್ತಡವನ್ನು ನಿಭಾಯಿಸಲು, ದೈಹಿಕ ಮತ್ತು ಮಾನಸಿಕ ಶಕ್ತಿಯನ್ನು ವೃದ್ಧಿಸುವ ಮೂಲಕ ಅವರನ್ನು ಮುಂದಿನ ಸವಾಲುಗಳಿಗೆ ಸಿದ್ಧಪಡಿಸಲು ಸಹಾಯ ಮಾಡುತ್ತದೆ. ಕ್ರೀಡೆಗಳನ್ನು ಆಡುವುದು ಅವರ ಜವಾಬ್ದಾರಿ, ನಾಯಕತ್ವದೊಂದಿಗೆ ಆತ್ಮವಿಶ್ವಾಸದಿಂದ ಕೆಲಸ ಮಾಡಲು ಕಲಿಯುವಂತಹ ಕೌಶಲ್ಯಗಳನ್ನು ಕಲಿಸುತ್ತದೆ.



## ವಿಶ್ವವಿದ್ಯಾಲಯದಲ್ಲಿ ಕ್ರೀಡಾ ಚಟುವಟಿಕೆಗಳು

ವಿಶ್ವವಿದ್ಯಾಲಯವು ಕ್ರೀಡೆಗೆ ಮಹತ್ವವನ್ನು ನೀಡುತ್ತಾ ಬರುತ್ತಿದ್ದು. 2022–23 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ವಿಶ್ವವಿದ್ಯಾಲಯದ ವತಿಯಿಂದ ಸೌತ್ ಝೋನ್ ಮತ್ತು ಅಂತರ ವಿಶ್ವವಿದ್ಯಾಲಯಗಳ ವಿವಿದ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಜವಾಹರಲಾಲ್ ನೆಹರು ತಾಂತ್ರಿಕ ವಿಶ್ವವಿದ್ಯಾಲಯ, ಕಾಕಿನಾಡು (ಆಂದ್ರ ಪ್ರದೇಶ) ಕಬಡ್ಡಿ, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಶ್ವವಿದ್ಯಾಲಯ, ಚನೈ(ತಮಿಳುನಾಡು)ನಲ್ಲಿ ಅಥ್ಲೇಟಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿ ವಿಶ್ವವಿದ್ಯಾಲಯಕ್ಕೆ ಹೆಮ್ಮೆಯನ್ನು ತಂದಿರುತ್ತಾರೆ.

ವಿಶ್ವವಿದ್ಯಾಲಯದ 6ನೇ ಅಥ್ಲೇಟಿಕ್ಸ್ ಕ್ರೀಡಾಕೂಟ ಮತ್ತು ಗುಂಪು ಆಟಗಳನ್ನು ಕ್ರೀಡೋತ್ಸವ ಎಂಬ ಹೆಸರಿನಿಂದ ಆಯೋಜಿಸಲಾಗಿತ್ತು. ಕ್ರೀಡೋತ್ಸವದಲ್ಲಿ ವಿದ್ಯಾರ್ಥಿಗಳು/ ಪ್ರೊಗ್ರಾಮ್‌ದವರು ತಮ್ಮ ತಮ್ಮ ಅಧ್ಯಯನ ಶಾಲೆಯ ಅಡಿಯಲ್ಲಿ ಭಾಗವಹಿಸಲು ಸೂಚಿಸಲಾಗಿತ್ತು. ಅದರಂತೆ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಅಥ್ಲೇಟಿಕ್ಸ್‌ನಲ್ಲಿ–160, ಬ್ಯಾಡ್ಮಿಂಟನ್‌ನಲ್ಲಿ–80, ಟೇಬಲ್ ಟೆನ್ನಿಸ್‌ನಲ್ಲಿ–42 ಹಾಗೂ ಗುಂಪು ಆಟಗಳಾದ ವಾಲೀಬಾಲ್, ಕಬಡ್ಡಿ, ಖೋ–ಖೋ, ಫುಟ್‌ಬಾಲ್, ಬಾಸ್ಕೇಟ್‌ಬಾಲ್ ಮತ್ತು ಕ್ರಿಕೇಟ್ ಸ್ಪರ್ಧೆಗಳಲ್ಲಿ ಭಾಗಿಯಾಗಿದ್ದರು.

ಕ್ರಿಕೇಟ್ ಪಂದ್ಯಾಟಗಳನ್ನು 24/09/2023 ರಂದು ವಿಶ್ವವಿದ್ಯಾಲಯದ ಕ್ರೀಡಾ ಮೈದಾನದಲ್ಲಿ ಆಯೋಜಿಸಲಾಗಿತ್ತು. ಈ ಪಂದ್ಯಾಟಗಳ ಉದ್ಘಾಟಕರಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀ. ಶರಣು ಗೋಗೇರಿಯವರು ಆಗಮಿಸಿದ್ದರು. ಅಂತಿಮ(ಪೈನಲ್) ಪಂದ್ಯವನ್ನು ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರ ನಡುವಿನ ಕ್ರಿಕೇಟ್ ಪಂದ್ಯವನ್ನು ವಿಕ್ಷಿಸಲು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿರವರು, ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ, ಹಣಕಾಸು ಅಧಿಕಾರಿಗಳಾದ ಶ್ರೀ. ಪ್ರಶಾಂತ ಜೆ ಸಿ ಅವರು ಆಗಮಿಸಿದ್ದರು ನಂತರ ಬಹುಮಾನವನ್ನು ವಿತರಿಸಿದರು.

6ನೇ ಅಥ್ಲೇಟಿಕ್ ಕ್ರೀಡಾಕೂಟವನ್ನು 29.09.2023 ರಂದು ಮುಂಜಾನೆ 9 ಘಂಟೆಗೆ ಕೆ. ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿತ್ತು. ಈ ಕ್ರೀಡಾ ಕೂಟವನ್ನು ಪ್ರಾರ್ಥನೆ ಮೂಲಕ ಪ್ರಾರಂಭಿಸಲಾಯಿತು. ನಂತರ ಮಾನ್ಯ ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರವರು ಗಣ್ಯಮಾನ್ಯರನ್ನು ಸ್ವಾಗತಿಸಿದರು, ಡಾ. ವಿರೇಶಕುಮಾರ ಬಿ. ವಿಜಾಪುರ, ಸಹಾಯಕ ನಿರ್ದೇಶಕರು ದೈಹಿಕ ಶಿಕ್ಷಣ ಮತ್ತು ಕ್ರೀಡೆ ಇವರು ಕ್ರೀಡೋತ್ಸವದ ಕುರಿತು ಪ್ರಾಸ್ತಾವಿಕ ನುಡಿಗಳನ್ನು ಆಡಿದರು. ತದನಂತರ ತಮ್ಮ ತಮ್ಮ ಅಧ್ಯಾಯನ ಶಾಲೆಯ ಅಡಿಯಲ್ಲಿ ಬರುವಂತಹ ಎಲ್ಲ ಶಾಖೆಗಳ ವಿದ್ಯಾರ್ಥಿಗಳಿಂದ ಮತ್ತು ಕ್ರೀಡಾಪಟುಗಳಿಂದ ಪಥಸಂಚಲನ ಮಾಡಲಾಯಿತು. ವಿಶ್ವವಿದ್ಯಾಲಯದ ಕ್ರೀಡಾಪಟುಗಳಿಂದ ಕ್ರೀಡಾಜ್ಯೋತಿಯನ್ನು ಆಗಮನ ಮಾಡಿಕೊಂಡು ನಂತರ ಪ್ರತಿಜ್ಞಾವಿಧಿಯನ್ನು ವಿಶ್ವವಿದ್ಯಾಲಯದ ಮಾನ್ಯ ಕುಲಸಚಿವರಾದ ಪ್ರೊ. ಬಸವರಾಜ ಎಲ್ ಲಕ್ಕಣ್ಣವರವರು ಕ್ರೀಡಾಪಟುಗಳಿಗೆ ಭೋದಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ. ಮಹೇಶ್ವರಿ ಉದಗಟ್ಟಿ ಎಸ್.ಜೆ.ಎಮ್.ವಾಯ್.ಎಸ್. ಮಹಿಳಾ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಜಯಚಾಮರಾಜ ನಗರ, ಹುಬ್ಬಳ್ಳಿ ಇವರು ಆಗಮಿಸಿದ್ದರು. ಇವರು ಮಾತನಾಡಿ ಕ್ರೀಡೆಯಲ್ಲಿ ಸಾಧನೆ ಮಾಡಲು ಇಚ್ಛಾಶಕ್ತಿ ಮತ್ತು ಮನೋಸ್ಥೈರ್ಯ ಮುಖ್ಯ ಎಂದರು. ಅತಿಥಿಗಳಾಗಿ ಅಧ್ಯಕ್ಷೀಯ ನುಡಿಗಳನ್ನಾಡಿದ ಮಾನ್ಯ ಕುಲಸಚಿವರು ರಾಷ್ಟ್ರೀಯ ತಂಡಗಳಲ್ಲಿ ಆಡುವ ಜನರು ತಮ್ಮ ಆಟಗಳಿಗಾಗಿ ಹೆಚ್ಚಾಗಿ ವಿದೇಶ ಪ್ರವಾಸ ಮಾಡುತ್ತಾರೆ. ಅವರು ವಿಭಿನ್ನ ಸಂಸ್ಕೃತಿಗಳನ್ನು ಅನುಭವಿಸುತ್ತಾರೆ ಮತ್ತು ವಿಶಾಲವಾದ ಮನಸ್ಸನ್ನು ಹೊಂದಲು ಮತ್ತು ಪ್ರಕೃತಿಯಲ್ಲಿ ಹೆಚ್ಚು ಅನ್ವೇಷಿಸಲು ಕ್ರೀಡೆಯು ಸಹಾಯಕಾರಿ. ಈ ಗುಣಗಳು ನಿಮ್ಮನ್ನು ಜಾಗತಿಕ ಪ್ರಜೆಯನ್ನಾಗಿ ಮಾಡಬಹುದು ಎಂದು ಪ್ರೇರಣಾದಾಯಕ ನುಡಿಗಳನ್ನಾಡಿ, ವಿದ್ಯಾರ್ಥಿಗಳಿಗೆ ಕ್ರೀಡೆಯಲ್ಲಿ ಭಾಗವಹಿಸಲು ಪ್ರೇರೇಪಿಸಿದರು.



# ಭೂಲೋಕದ ಸಂಜೀವಿನಿ "ಅಮೃತಬಳ್ಳಿ"





**ಡಾ. ಲಿಂಗರಾಜು ನಿಡುವಣಿ**
ಉಪನ್ಯಾಸಕರು ಹಾಗೂ
ಸಂಯೋಜಕರು, ಸ್ಮೃತಿವನ
ಕ.ರಾ.ಗ್ರಾ. ಮತ್ತು ಪಂ. ರಾಜ್
ವಿಶ್ವವಿದ್ಯಾಲಯ, ಗದಗ

ವೈಜ್ಞಾನಿಕ ಹೆಸರು : Tinosporacordifolia
ಕುಟುಂಬ : Menispermaceae

**ಬಹುಭಾಷಾ ಹೆಸರುಗಳು :**
ಕನ್ನಡ: ಅಮೃತಬಳ್ಳಿ
ಸಂಸ್ಕೃತ: ಗುಡೂಚೀ
ಹಿಂದಿ: ಗಿಲೋಯ್
ತುಳು: ಅಮೃತಬಳ್ಳಿ
ಇಂಗ್ಲಿಷ್: ಪೋಯಿಸನ್ ಬೆರಿ, ಹಾರ್ಟ್ ಲೀವ್ಡ್ ಮೂನ್ ಸೀಡ್
ತಮಿಳು: ಕಿಂದಿಕೋಡಿ

ಪರ್ಯಾಯ ಪದಗಳು:
ಅಮೃತ, ಅಮೃತಬಳ್ಳಿ, ಜೀವಂತಿಕ, ಜ್ವರಾರಿ, ಕುಮಾರಿಕ, ಶ್ಯಾಮ, ಗುಡೂಚೀ, ಕುಂಡಲೀ, ಗುಡುಚೀಕಾ, ಚಕ್ರಾಂಗೀ, ಚಕ್ರ ಲಕ್ಷಣ, ಚಂದ್ರಹಾಸ, ತಂತ್ರಿಕಾ, ದೇವನಿರ್ಮಿತ, ನಾಗಕನ್ಯಾಕ, ನಾಗಕುಮಾರಿಕ, ಭಿಷಕ್ ಪ್ರಿಯಾ, ಮಂಡಲೀ, ಸೋಮಾ

ವರ್ಣನೆ:
ಅರಿಶಿನವು ಪ್ರಪಂಚದಾದ್ಯಂತ ಪ್ರಸಿದ್ಧವಾಗಿದೆ. ಈ ಮೂಲಿಕೆ 6000 ವರ್ಷಗಳಿಂದ ಪ್ರತಿ ಭಾರತೀಯ ಅಡುಗೆ ಮನೆಯನ್ನು ಆಕ್ರಮಿಸಿಕೊಂಡಿದೆ ಮತ್ತು ಇದನ್ನು ಅಡುಗೆ ಮನೆಯ ರಾಜ ಎಂದು ಪರಿಗಣಿಸಲಾಗಿದೆ. ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಬಳಕೆಯಾಗುತ್ತಿದ್ದ ಒಂದು ಪ್ರಮುಖ ಮಸಾಲೆಯ ವಸ್ತು ಮತ್ತು ಔಷಧ ಸಸ್ಯ ಆಹಾರ ಮತ್ತು ಆರೋಗ್ಯದಲ್ಲಷ್ಟೆ ಅಲ್ಲ, ಧಾರ್ಮಿಕವಾಗಿಯೂ ಪೂಜಾ ಸಾಮಗ್ರಿಗಾಗಿ ಹಾಗೂ ಸೌಂದರ್ಯವರ್ಧಕವಾಗಿಯೂ ಇದನ್ನು ನಿತ್ಯ ಪ್ರತಿ ರುಚಿಯಲ್ಲಿ ಕಹಿಯಾಗಿರುವ ಇದು ಅನೇಕ ಉಪಯುಕ್ತ ಗುಣವನ್ನು ಹೊಂದಿ ದೇಹದ

ಅಂಗಾಗಗಳ ಆರೋಗ್ಯ ಹಾಗೂ ರೋಗ ನಿರೋಧಕವಾಗಿ ಕೆಲಸ ಮಾಡುತ್ತದೆ. ಅರಿಶಿಣ ಒಂದು ಬಹುವಾರ್ಷಿಕ ಸಸ್ಯ. ಬಹು ವಾರ್ಷಿಕವಾದ ಅರಿಶಿಣ ಒಂದರಿಂದ ಮೂರು ಮೀಟರ್ ಎತ್ತರಕ್ಕೆ ಬೆಳೆಯುತ್ತದೆ. ಎಲೆಯೂ ಒಂದು ಎರಡು ಮೀಟರ್‌ನಷ್ಟು ಉದ್ದವಾಗಿ ಬೆಳೆದು ವಾಸನೆಯನ್ನು ಬೀರುತ್ತದೆ. ಈ ಸಸ್ಯವು ಹಳದಿ ಬಣ್ಣದ ಹೂಗಳನ್ನು ಬಿಡುತ್ತದೆ.

**ವಿಧಗಳು**

- ಹರಿದ್ರಾ
- ದಾರುಹರಿದ್ರಾ
- ವನಹರಿದ್ರಾ
- ಆಮ್ರಗಂಧಿ ಹರಿದ್ರಾ

**ಉಪಯೋಗಗಳು :**

- ಹುರಿದ ಅರಿಶಿಣ ಚೂರ್ಣವನ್ನು ಜೇನಿನೊಂದಿಗೆ ತೆಗೆದುಕೊಳ್ಳುವುದರಿಂದ ಅಸ್ತಮಾ, ಹಾಗೂ ಕೆಮ್ಮು ರೋಗಕ್ಕೆ ಒಳ್ಳೆಯದು.
- ಶೀತ ನೆಗಡಿ ಇರುವಾಗ ಒಂದು ಲೋಟ ಬಿಸಿ ಹಾಲಿಗೆ ಒಂದು ಚಮಚ ಅರಿಶಿನ ಪುಡಿ ಹಾಗೂ ಬೆಲ್ಲ ಸೇರಿಸಿ ದಿನಕ್ಕೆ ಎರಡು ಬಾರಿ ಸೇವಿಸಬೇಕು.
- ಸಂಧಿವಾತ ನಿವಾರಣೆಗಾಗಿ ಅರಿಶಿನ ಚೂರ್ಣ ಮತ್ತು ಶುಂಠಿಯನ್ನು ಸಮಾನ ಭಾಗದಲ್ಲಿ ತೆಗೆದುಕೊಂಡು ಹಾಲಿನ ಜೊತೆಗೆ ಸೇವಿಸಬೇಕು.
- ಅರಿಶಿಣ ಹಾಗೂ ಶ್ರೀಗಂಧವನ್ನು ತೇಯ್ದು ಪ್ರತಿದಿನ ಮುಖಕ್ಕೆ ಹಚ್ಚಿಕೊಂಡರೆ ಮುಖವು ಕಾಂತಿಯುತವಾಗುತ್ತದೆ. ಮೊಡವೆ ಮತ್ತು ಕಲೆಗಳು ಇದರಿಂದ ಗುಣವಾಗುತ್ತವೆ.
- ಹರಳೆಣ್ಣೆಯಲ್ಲಿ ಅರಿಶಿನ ಪುಡಿಯನ್ನು ಕಲಿಸಿ ಬಿಸಿ ಮಾಡಿ ದಪ್ಪನಾದ ಕುರುಗಳಿಗೆ ಕಟ್ಟಬೇಕು. ದಿನದಲ್ಲಿ ಎರಡು ಬಾರಿ ಲೇಪನ ಮಾಡಿ ಕಟ್ಟುವುದರಿಂದ ಕುರುಗಳು ಒಡೆಯುತ್ತವೆ.
- ಹೃದಯ ನೋವಿನ ನಿವಾರಣೆಗಾಗಿ ಅರ್ಧ ಚಮಚ ಅರಿಶಿನ ಪುಡಿಗೆ ಒಂದು ಚಮಚ ಕಲ್ಲು ಸಕ್ಕರೆ ಸೇರಿಸಿ ನುಂಗಬೇಕು.
- ಅರಿಶಿಣ ಅತ್ಯುತ್ತಮ ರಕ್ತ ಶುದ್ಧೀಕರಣಕಾರಕ, ಇದು ಯಕೃತ್ತು ಮತ್ತು ರಕ್ತದಲ್ಲಿ ಸಂಗ್ರಹವಾದ ವಿಷವನ್ನು ಹೊರಹಾಕಲು ಸಹಾಯ ಮಾಡುತ್ತದೆ.
- ಈಗಲೂ ಮಕ್ಕಳು ಬಿದ್ದು ಗಾಯ ಮಾಡಿಕೊಂಡರೆ ಹಿರಿಯರು ಹಾಲಿಗೆ ಅರಿಶಿಣ ಪುಡಿಯನ್ನು ಸೇರಿಸಿ ಸೇವಿಸುವಂತೆ ಹೇಳುತ್ತಾರೆ. ಅರಿಷಿಣ ಗಾಯಗಳನ್ನು ಮಾಯಿಸುವ ಗುಣವನ್ನು ಹೊಂದಿದೆ ಮತ್ತು ಜೀವಕೋಶಗಳಿಗೆ ಉಂಟಾಗುವ ಹಾನಿಯನ್ನು ತಡೆಯುತ್ತದೆ.
- ಅರಿಶಿಣವನ್ನು ನಿಯಮಿತವಾಗಿ ಸೇವಿಸಿದಾಗ ಕರುಳಿನ ಜಂತುಗಳನ್ನು ನಿರ್ಮೂಲನೆ ಮಾಡಲು ಸಹಾಯ ಮಾಡುತ್ತದೆ ಮತ್ತು ದೇಹದ ಪ್ರತಿರಕ್ಷೆಯನ್ನು ಹೆಚ್ಚಿಸುತ್ತದೆ.
- ಅರಿಷಿಣ ಹಾಲು ಟೈಪ್–1 ಮಧುಮೇಹಿಗಳಲ್ಲಿ ರಕ್ತದಲ್ಲಿಯ ಸಕ್ಕರೆ ಮಟ್ಟವನ್ನು ನಿಯಂತ್ರಿಸಲು ನೆರವಾಗುತ್ತದೆ ಎನ್ನುವುದನ್ನು ವಿವಿಧ ಅಧ್ಯಯನಗಳು ತೋರಿಸಿವೆ. ಅದು ಕ್ಯಾನ್ಸರ್‌ಗೆ ಗುರಿಯಾಗುವ ಅಪಾಯವನ್ನೂ ಕಡಿಮೆ ಮಾಡುತ್ತದೆ.
- ಬೇರಿನ ಪುಡಿ ಮಾಡಿ ನೀರಿನಲ್ಲಿ ಕುದಿಸಿ ಆ ನೀರಿನಿಂದ ಕಣ್ಣನ್ನು ಒರೆಸಿದರೆ ಕೆಂಗಣ್ಣು ರೋಗವು ಗುಣವಾಗುತ್ತದೆ.
- ಹರಿದ್ರ ಚೂರ್ಣವನ್ನು ನೀರಿನಲ್ಲಿ ಬೆರೆಸಿ ಅದಕ್ಕೆ ಸ್ವಲ್ಪ ಪ್ರಮಾಣದ ಹುಣಸೆ ಎಲೆಯ ರಸವನ್ನು ಸೇರಿಸಿ ಕುಡಿಯುವುದರಿಂದ ಸಿಡುಬು ರೋಗಕ್ಕೆ ಒಳ್ಳೆಯದು.
- ಅರಿಶಿನವನ್ನು ತ್ರಿಫಲ ಚೂರ್ಣದೊಂದಿಗೆ ಬೆರೆಸಿ, ತುಪ್ಪ ಮತ್ತು ಜೇನನ್ನು ಸೇರಿಸಿ ಕುಡಿಯುವುದರಿಂದ ರಕ್ತಹೀನತೆಯಿಂದ ಬಳಲುತ್ತಿರುವವರಿಗೆ ಒಳ್ಳೆಯದು.
- ಅರಿಶಿಣದ ಪುಡಿಯನ್ನು ಶುದ್ಧವಾದ ತುಪ್ಪ ಅಥವಾ ಎಣ್ಣೆಯಲ್ಲಿ ಸಮ ಪ್ರಮಾಣದಲ್ಲಿ ಬೆರೆಸಿ ಮುಲಾಮಿನಂತೆ ಮಾಡಿ ಗಾಯಗಳಿಗೆ ಹಚ್ಚುವುದರಿಂದ ಗಾಯಗಳು ಬೇಗ ಒಣಗುತ್ತವೆ.
- ಕಫಯುಕ್ತ ಕೆಮ್ಮಿನಲ್ಲಿ ಒಂದು ಲೋಟ ನೀರಿಗೆ ಕಾಲು ಚಮಚ ಅರಿಶಿಣದ ಪುಡಿ ಹಾಕಿ ಕುದಿಸಿ ಸ್ವಲ್ಪ ಬೆಲ್ಲ ಸೇರಿಸಿ ಕುಡಿಯಬೇಕು.

***



# ವಿಶ್ವವಿದ್ಯಾಲಯದ ಚಟುವಟಿಕೆಗಳು

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಮಾನ್ಯ ಕುಲಪತಿಗಳ, ಕುಲಸಚಿವರ ಹಾಗೂ ಹಣಕಾಸು ಅಧಿಕಾರಿಗಳ ನೇತೃತ್ವದಲ್ಲಿ ಶೈಕ್ಷಣಿಕ ಹಾಗೂ ವಿವಿಧ ವಿಸ್ತರಣ ಚಟುವಟಿಕೆಗಳನ್ನು ಯಶಸ್ವಿಯಾಗಿ ಜರುಗಿಸಲಾಗುತ್ತಿದೆ. ವಿಶ್ವವಿದ್ಯಾಲಯವು ಗ್ರಾಮೀಣ ಪರಿವರ್ತನೆಯತ್ತ ಹಲವಾರು ಹೆಜ್ಜೆಗಳನ್ನು ಇಡುತ್ತಿದ್ದು, ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಅನೇಕ ಕಾರ್ಯಚಟುವಟಿಕೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸುತ್ತಾ ಬಂದಿದೆ. ಎಂದಿನಂತೆ 2023 ರ ಅಕ್ಟೋಬರ್‌ನಿಂದ ಡಿಸೆಂಬರ್ ತಿಂಗಳಲ್ಲಿ ಕೂಡ ಹಲವಾರು ವಿಶಿಷ್ಟವಾದ ಮತ್ತು ವಿಭಿನ್ನವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಅವುಗಳಲ್ಲಿ ಪ್ರಮುಖವಾದವುಗಳ ವಿವರ ಈ ಕೆಳಗಿನಂತಿದೆ.

## ವಿಶ್ವವಿದ್ಯಾಲಯದಲ್ಲಿ ಮಹಾತ್ಮ ಗಾಂಧಿ ಹಾಗೂ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಆವರಣದಲ್ಲಿರುವ ಸಬರಮತಿ ಆಶ್ರಮದಲ್ಲಿ ಮಹಾತ್ಮ ಗಾಂಧಿ ಹಾಗೂ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯನ್ನು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ಹಾಗೂ ಕುಲಸಚಿವರಾದ ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ ಅವರು ಉಪಸ್ಥಿತರಿದ್ದರು.

ವಿಶ್ವವಿದ್ಯಾಲಯದ ವಿವಿಧ ಭಾಗಗಳಲ್ಲಿ "ಏಕ್ ತಾರೀಕ್–ಏಕ್ ಘಂಟಾ" ಕಾರ್ಯಕ್ರಮದಡಿ "ಸ್ವಚ್ಛತಾ ಹೀ ಸೇವಾ" ಅಭಿಯಾನದ ಭಾಗವಾಗಿ ಸ್ವಚ್ಛತಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರದಲ್ಲಿ ವಿಶ್ವವಿದ್ಯಾಲಯದ ಎಲ್ಲಾ ವಿಭಾಗಗಳ ಅಧಿಕಾರಿಗಳು, ಸಿಬ್ಬಂದಿಗಳು, ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿಗಳು–ಸ್ವಯಂಸೇವಕರು ಹಾಗೂ ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ವಿಶ್ವವಿದ್ಯಾಲಯದಲ್ಲಿ "ಗಾಂಧಿ ಚಿಂತನ– ಮಂಥನ ಹಾಗೂ ಸತ್ಸಂಗ (35)" ಕಾರ್ಯಕ್ರಮ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವವಿದ್ಯಾಲಯದ ವತಿಯಿಂದ "ಗಾಂಧಿ ಚಿಂತನ –ಮಂಥನ ಹಾಗೂ ಸತ್ಸಂಗ (ಸರಣಿ 35)" ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದ ಆವರಣದಲ್ಲಿರುವ ಸಬರಮತಿ ಆಶ್ರಮದಲ್ಲಿ ದಿನಾಂಕ 11–10–2023 ರಂದು ಭಜನೆ ಹಾಗೂ ಉಪನ್ಯಾಸದೊಂದಿಗೆ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ವಹಿಸಿದ್ದು, ಕುಲಸಚಿವರಾದ ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ ರವರು, ಹಣಕಾಸು ಅಧಿಕಾರಿಗಳಾದ ಶ್ರೀ ಪ್ರಶಾಂತ ಜೆ. ಸಿ. ಯವರು, ಸಬರಮತಿ ಆಶ್ರಮದ ಸಂಚಾಲನಾ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

# ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ "ಗುರುದೀಕ್ಷಾ" (ಸವಿನೆನಪು) ಸಮಾರಂಭ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕೌಶಲ್ಯ ವಿಕಾಸ ಭವನದಲ್ಲಿ ದಿನಾಂಕ 12-10-2023 ರಂದು 2022-23ನೇ ಸಾಲಿನ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಅಂತಿಮ ವರ್ಷದ ವಿದ್ಯಾರ್ಥಿಗಳ "ಗುರುದೀಕ್ಷಾ" (ಸವಿನೆನಪು) ಸಮಾರಂಭವನ್ನು ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ವಹಿಸಿದ್ದು, ಕುಲಸಚಿವರಾದ ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ ಅವರು, ಎಲ್ಲಾ ವಿದ್ಯಾರ್ಥಿಗಳು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಭಾಗವಹಿಸಿದ್ದರು.




2022-23ನೇ ಸಾಲಿನ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳ ಅಂತಿಮ ವರ್ಷದ ವಿದ್ಯಾರ್ಥಿಗಳು "ಗುರುದೀಕ್ಷಾ" (ಸವಿನೆನಪು) ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು

# ವಿಶ್ವವಿದ್ಯಾಲಯದಲ್ಲಿ ವಿಶ್ವ ಆಹಾರ ದಿನಾಚಾರಣೆ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವವಿದ್ಯಾಲಯದ ಆಹಾರ ವಿಜ್ಞಾನ ಹಾಗೂ ತಂತ್ರಜ್ಞಾನ ಮತ್ತು ಕೃಷಿ ವ್ಯವಹಾರ ಹಾಗೂ ಆಹಾರ ಸಂರಕ್ಷಣೆ ವಿಭಾಗಗಳ ವತಿಯಿಂದ ವಿಶ್ವ ಆಹಾರ ದಿನಾಚರಣೆಯನ್ನು ವಿಶ್ವವಿದ್ಯಾಲಯದ ಕೌಶಲ್ಯ ವಿಕಾಸ ಭವನದಲ್ಲಿ ಆಚರಿಸಲಾಯಿತು. ಈ ದಿನದಂದು ಆಹಾರ ಸಂಸ್ಕರಣ ವಿಭಾಗದ ವತಿಯಿಂದ ಸಿರಿಧಾನ್ಯಗಳಿಂದ ತಯಾರಿಸಿದ ತಿಂಡಿ ಪದಾರ್ಥಗಳ ಪ್ರದರ್ಶನ ಮತ್ತು ಮಾರಾಟವನ್ನು ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳಿಗೆ ಸಿರಿಧಾನ್ಯಗಳ ಮಹತ್ವದ ಬಗ್ಗೆ ಮಾಹಿತಿ ನೀಡುವ ಬಿತ್ತಿ ಚಿತ್ರಗಳನ್ನು ಪ್ರದರ್ಶಿಸಲಾಗಿತ್ತು. ವಿದ್ಯಾರ್ಥಿಗಳ ಮಧ್ಯೆ ಸ್ಪರ್ಧೆಯನ್ನು ಆಯೋಜಿಸಿ, ಸಿರಿಧಾನ್ಯಗಳ ಉತ್ತೇಜನವನ್ನು ಪ್ರೋತ್ಸಾಹಿಸಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀಮತಿ ರತ್ನಶ್ರೀ ಕೆ. ರಾಯವರು ಟ್ರಸ್ಟಿಗಳು ಆನೆಗುಂದಿ ಫೌಂಡೇಷನ್ ಮತ್ತು ವಿಜಯನಗರ ಉಜ್ಜಿವಾಣಿ ಟ್ರಸ್ಟ್ ಇವರು ಭಾಗವಹಿಸಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ ಅವರು, ಹಣಕಾಸು ಅಧಿಕಾರಿಗಳಾದ ಶ್ರೀ ಪ್ರಶಾಂತ ಜೆ. ಸಿ. ಯವರು ಉಪಸ್ಥಿತರಿದ್ದು, ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ವಿಶ್ವವಿದ್ಯಾಲಯದಲ್ಲಿ "ಗಾಂಧಿ ಚಿಂತನ- ಮಂಥನ ಹಾಗೂ ಸತ್ಸಂಗ (36) ಮತ್ತು ದೀಪಾವಳಿ ಮಿಲನ" ಕಾರ್ಯಕ್ರಮ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ವತಿಯಿಂದ "ಗಾಂಧಿ ಚಿಂತನ -ಮಂಥನ, ಸತ್ಸಂಗ (ಸರಣಿ 36) ಮತ್ತು ದೀಪಾವಳಿ ಮಿಲನ" ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದ ಆವರಣದಲ್ಲಿರುವ ಸಬರಮತಿ ಆಶ್ರಮದಲ್ಲಿ ದಿನಾಂಕ 11-11-2023 ರಂದು ಭಜನೆ ಹಾಗೂ ಉಪನ್ಯಾಸದೊಂದಿಗೆ

ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ವಹಿಸಿದ್ದು, ಕುಲಸಚಿವರಾದ ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ, ಹಣಕಾಸು ಅಧಿಕಾರಿಗಳಾದ ಶ್ರೀ ಪ್ರಶಾಂತ ಜೆ. ಸಿ. ಹಾಗೂ ಸಬರಮತಿ ಆಶ್ರಮದ ಸಂಚಾಲನಾ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

## ವಿಶ್ವವಿದ್ಯಾಲಯದಲ್ಲಿ 74ನೇ "ಸಂವಿಧಾನ ದಿನ" ಆಚರಣೆ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಆವರಣದಲ್ಲಿರುವ ಕೌಶಲ್ಯ ವಿಕಾಸ ಭವನದಲ್ಲಿ 74ನೇ ಸಂವಿಧಾನ ದಿನವನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಸಿ. ನಾರಾಯಣ ಸ್ವಾಮಿ, ಅಧ್ಯಕ್ಷರು, 5ನೇ ರಾಜ್ಯ ಹಣಕಾಸು ಆಯೋಗ, ಕರ್ನಾಟಕ ಸರ್ಕಾರ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದು, ಶ್ರೀ ವಿ. ವೈ. ಗೋರ್ಪಡೆ, ಅಧ್ಯಕ್ಷರು, ಯುನಿವರ್ಸಲ್ ಕ್ಲೀನ್ ಎನರ್ಜಿ ಫೌಂಡೇಷನ್ ಹಾಗೂ ಶ್ರೀ ಪ್ರಮೋದ್ ಹೆಗಡೆ, ಅಧ್ಯಕ್ಷರು, ಕರ್ನಾಟಕ ವಿಕೇಂದ್ರಿಕರಣ ಇವರು ಗೌರವ ಅತಿಥಿಗಳಾಗಿ ಆಗಮಿಸಿದ್ದರು. ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ಹಾಗೂ ಕುಲಸಚಿವರಾದ ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ವಿಶ್ವವಿದ್ಯಾಲಯದಲ್ಲಿ 74ನೇ ಸಂವಿಧಾನ ದಿನದಂದು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಸಿ. ನಾರಾಯಣ ಸ್ವಾಮಿ, ಅಧ್ಯಕ್ಷರು, 5ನೇ ರಾಜ್ಯ ಹಣಕಾಸು ಆಯೋಗ, ಕರ್ನಾಟಕ ಸರ್ಕಾರ ಇವರು ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡುತ್ತಿರುವುದು.

## ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು "VIKSIT BHARAT@2047" ಕಾರ್ಯಕ್ರಮದಲ್ಲಿ ಭಾಗಿ

ದಿನಾಂಕ 11-12-2023 ರಂದು ನಡೆದ "VIKSIT BHARAT@2047" ಆನ್‌ಲೈನ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರೊಂದಿಗೆ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರು ಹಾಗೂ ಕರ್ನಾಟಕದಲ್ಲಿರುವ ಇತರ ವಿಶ್ವವಿದ್ಯಾಲಯಗಳ ಕುಲಪತಿಗಳು ಮತ್ತು ನಿರ್ದೇಶಕರು ರಾಜಭವನ, ಕರ್ನಾಟಕ ಭಾಗವಹಿಸಿದ್ದರು. ಭಾರತದ ಗೌರವಾನ್ವಿತ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಆನ್‌ಲೈನ್ ಮೂಲಕ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.



ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರೊಂದಿಗೆ
ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರು
ಹಾಗೂ ಕರ್ನಾಟಕದಲ್ಲಿರುವ ಇತರ ವಿಶ್ವವಿದ್ಯಾಲಯಗಳ ಕುಲಪತಿಗಳು ಮತ್ತು ನಿರ್ದೇಶಕರು

## ವಿಶ್ವವಿದ್ಯಾಲಯದಲ್ಲಿ "ಮಾನವ ಹಕ್ಕುಗಳು ಮತ್ತು ಗಾಂಧಿ ಚಿಂತನ- ಮಂಥನ ಹಾಗೂ ಸತ್ಸಂಗ (37)" ಕಾರ್ಯಕ್ರಮ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವವಿದ್ಯಾಲಯದ ವತಿಯಿಂದ "ಮಾನವ ಹಕ್ಕುಗಳು ಮತ್ತು ಗಾಂಧಿ ಚಿಂತನ -ಮಂಥನ ಹಾಗೂ ಸತ್ಸಂಗ (ಸರಣಿ 37)" ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದ ಆವರಣದಲ್ಲಿರುವ ಸಬರಮತಿ ಆಶ್ರಮದಲ್ಲಿ ದಿನಾಂಕ 11–12–2023 ರಂದು ಭಜನೆ ಹಾಗೂ ಉಪನ್ಯಾಸದೊಂದಿಗೆ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ವಹಿಸಿದ್ದು, ಕುಲಸಚಿವರಾದ ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರರವರು, ಹಣಕಾಸು ಅಧಿಕಾರಿಗಳಾದ ಶ್ರೀ ಪ್ರಶಾಂತ ಜೆ. ಸಿ. ಯವರು, ಸಬರಮತಿ ಆಶ್ರಮದ ಸಂಚಾಲನಾ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.



## ವಿಶ್ವವಿದ್ಯಾಲಯಕ್ಕೆ ನೂತನ ಕುಲಸಚಿವರ ನೇಮಕ



ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗನ ಕುಲಸಚಿವರಾಗಿ ದಿನಾಂಕ 15.12.2023 ರಂದು ಪ್ರೊ. ಡಾ. ಸುರೇಶ ವಿ. ನಾಡಗೌಡರ ಅವರು ಅಧಿಕಾರ ವಹಿಸಿಕೊಂಡರು. ಪ್ರೊ. ಬಸವರಾಜ ಎಲ್. ಲಕ್ಕಣ್ಣವರು ಅಧಿಕಾರವನ್ನು ಹಸ್ತಾಂತರಿಸಿದರು. ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ನೂತನ ಕುಲಸಚಿವರನ್ನು ವಿಶ್ವವಿದ್ಯಾಲಯಕ್ಕೆ ಸ್ವಾಗತಿಸಿ, ಅಭಿನಂದಿಸಿ, ಪ್ರೊ. ಬಸವರಾಜ ಎಲ್. ಲಕ್ಕಣ್ಣವರನ್ನು ಹೃದಯ ಪೂರ್ವಕವಾಗಿ ಬೀಳ್ಕೊಟ್ಟರು. ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಗಳಾದ ಶ್ರೀ ಪ್ರಶಾಂತ ಜೆ. ಸಿ., ಆಡಳಿತಾಧಿಕಾರಿಗಳಾದ ಶ್ರೀ ಶಶಿಭೂಷಣ ದೇವೂರು, ಡಾ. ಪ್ರಕಾಶ್ ಭಟ್ ಮತ್ತು ವಿಶ್ವವಿದ್ಯಾಲಯದ ಇತರ ಅಧಿಕಾರಿಗಳು ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಪ್ರೊ. ಡಾ. ಸುರೇಶ ನಾಡಗೌಡರ ಅವರು ಈ ವಿಶ್ವವಿದ್ಯಾಲಯದ ಸ್ಥಾಪನೆಯ ಸಂದರ್ಭದಲ್ಲಿ ನೇಮಕವಾದ ಪ್ರಥಮ ಕುಲಸಚಿವರು. ಅವರ ಕ್ರಿಯಾಶೀಲ ಗುಣ, ಕಾರ್ಯವೈಖರಿಯ ಪ್ರತಿಫಲವೇ ವಿಶ್ವವಿದ್ಯಾಲಯದ ಸ್ಥಾಪನೆಗೆ

ಮುನ್ನುಡಿಯಾಯಿತು. ಹತ್ತು ಹಲವು ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳು ಆರಂಭಗೊಳ್ಳಲು ಕಾರಣಿಕರ್ತರಾಗಿದ್ದಾರೆ. ಇವರು ಈ ಹಿಂದೆ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಹಾಗೂ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯಲ್ಲಿ ಕುಲಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ಪುನಃ ಕೆ.ಎಸ್.ಆರ್.ಡಿ.ಪಿ.ಆರ್. ವಿಶ್ವವಿದ್ಯಾಲಯದಲ್ಲಿ ಎರಡನೆ ಬಾರಿಗೆ ಕುಲಸಚಿವರಾಗಿ ನೇಮಕವಾಗಿದ್ದಾರೆ. ಇವರಿಗೆ ತರಬೇತಿ ಪ್ರಕಟಣೆ ಮತ್ತು ಮೇಲ್ವಿಚಾರಣೆ ವಿಭಾಗದ ವತಿಯಿಂದ ಆತ್ಮೀಯ ಸ್ವಾಗತವನ್ನು ಬಯಸುತ್ತೇವೆ.



ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರ ಉಪಸ್ಥಿತಿಯಲ್ಲಿ ವಿಶ್ವವಿದ್ಯಾಲಯದ ಕುಲಸಚಿವರ ಅಧಿಕಾರವನ್ನು ಪ್ರೊ. ಡಾ. ಸುರೇಶ ವಿ. ನಾಡಗೌಡರ ಇವರಿಗೆ ಹಸ್ತಾಂತರಿಸುತ್ತಿರುವುದು.



## ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಜೊತೆ ಉತ್ಸಾಹಿ ಪರಿಸರವಾದಿ ಶ್ರೀ ರಾಬಿನ್ ಸಿಂಗ್ ಸಂವಾದ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯಕ್ಕೆ ಉತ್ಸಾಹಿ ಪರಿಸರವಾದಿಗಳು ಶ್ರೀ ರಾಬಿನ್ ಸಿಂಗ್ ರವರು ದಿನಾಂಕ 21.12.2023 ರಂದು ಆಗಮಿಸಿದರು. ಅವರು ಹಸಿರು ಭಾರತ ಆಂದೋಲನದ ಕುರಿತು ಜಾಗೃತಿ ಮೂಡಿಸುವ ಮೂಲಕ ಭಾರತದ ಎಲ್ಲಾ ರಾಜ್ಯಗಳನ್ನು ಒಳಗೊಂಡ ಸೈಕಲ್ ಯಾತ್ರೆಯಲ್ಲಿದ್ದಾರೆ. ಇಲ್ಲಿಯವರೆಗೆ ಅವರು ತಮ್ಮ ಪ್ರಯಾಣದ 441 ದಿನಗಳಲ್ಲಿ 26,000+ ಕಿ.ಮೀ.ಗಳನ್ನು ಕ್ರಮಿಸಿದ್ದಾರೆ. ವಿಶ್ವವಿದ್ಯಾಲಯದಲ್ಲಿದ್ದ ಸಮಯದಲ್ಲಿ ಅವರು ಸಬರಮತಿ ಆಶ್ರಮಕ್ಕೆ ಭೇಟಿ ನೀಡಿದ್ದರು ಮತ್ತು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ್ದರು. ಅವರ ಈ ಪ್ರಯಾಣವು ಅನೇಕ ವಿದ್ಯಾರ್ಥಿಗಳಿಗೆ ಮತ್ತು ಸಮಾನ ಮನಸ್ಕ ವ್ಯಕ್ತಿಗಳಿಗೆ ಸ್ಫೂರ್ತಿದಾಯಕವಾಗಬಹುದು.



ಉತ್ಸಾಹಿ ಪರಿಸರವಾದಿ ಶ್ರೀ ರಾಬಿನ್ ಸಿಂಗ್‌ರವರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸುತ್ತಿರುವುದು.

# ವಿಶ್ವವಿದ್ಯಾಲಯಕ್ಕೆ ಪ್ರತಿಷ್ಠಿತ ರಾಮನ್ ಮ್ಯಾಂಗೆಸ್ಸೆ ಪ್ರಶಸ್ತಿ ಪುರಸ್ಕೃತರಾದ ಮತ್ತು ಭಾರತದ ವಾಟರ್‌ಮ್ಯಾನ್ ಡಾ. ರಾಜೇಂದ್ರ ಸಿಂಗ್‌ರವರ ಆಗಮನ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯಕ್ಕೆ ಪ್ರತಿಷ್ಠಿತ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತರಾದ ಮತ್ತು ಭಾರತದ ವಾಟರ್‌ಮ್ಯಾನ್ ಎಂದು ಕರೆಯಲ್ಪಡುವ ರಾಜಸ್ಥಾನದ ಡಾ. ರಾಜೇಂದ್ರ ಸಿಂಗ್ ಅವರು ದಿನಾಂಕ 21-12-2023 ರಂದು ಭೇಟಿ ನೀಡಿದರು. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಅವರು ವಿಶ್ವವಿದ್ಯಾಲಯದ ಆವರಣದಲ್ಲಿ ನೀರಿನ ಸಂರಕ್ಷಣೆ ಮತ್ತು ಪುನರುಜ್ಜೀವನಕ್ಕಾಗಿ ಉಪಯುಕ್ತ ಮಾರ್ಗದರ್ಶನ ನೀಡಿದರು.



ಪ್ರತಿಷ್ಠಿತ ರಾಮನ್ ಮ್ಯಾಂಗೆಸ್ಸೆ ಪ್ರಶಸ್ತಿ ಪುರಸ್ಕೃತರಾದ ಮತ್ತು ಭಾರತದ ವಾಟರ್‌ಮ್ಯಾನ್ ಡಾ. ರಾಜೇಂದ್ರ ಸಿಂಗ್‌ರವರು ವಿಶ್ವವಿದ್ಯಾಲಕ್ಕೆ ಭೇಟಿ

# ವಿಶ್ವವಿದ್ಯಾಲಯದಲ್ಲಿ "ರಾಷ್ಟ್ರೀಯ ರೈತರ ದಿನಾಚರಣೆ"

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ದಿನಾಂಕ 23.12.2023 ರಂದು "ರಾಷ್ಟ್ರೀಯ ರೈತರ ದಿನಾಚರಣೆಯನ್ನು" ಆಚರಿಸಲಾಯಿತು. ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದು, ಅತಿಥಿಗಳಾಗಿ ಶ್ರೀ ಜಿ. ಆರ್. ಓದುಗೌಡರ, ಪ್ರಗತಿಪರ ರೈತರು, ಹುಲಕೋಟಿ ಹಾಗೂ ಶ್ರೀ ರುದ್ರೇಶ ಗಲಗಲಿ ಪ್ರಗತಿಪರ ರೈತರು, ಗದಗ ಇವರು ಆಗಮಿಸಿದ್ದರು. ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ನೂತನ ಕುಲಸಚಿವರಾದ ಪ್ರೊ. ಡಾ. ಸುರೇಶ ವಿ. ನಾಡಗೌಡರರವರು ಹಾಗೂ ಹಣಕಾಸು ಅಧಿಕಾರಿಗಳಾದ ಶ್ರೀ ಪ್ರಶಾಂತ ಜೆ. ಸಿ. ಯವರು ಉಪಸ್ಥಿತರಿದ್ದರು ಹಾಗೂ ಗದಗ ಜಿಲ್ಲೆಯ ಸುತ್ತಮುತ್ತಲಿನ ಹಳ್ಳಿಯ ಪ್ರಗತಿಪರ ರೈತರು ಹಾಗೂ ಮಹಿಳಾ ಸಮುದಾಯದವರು ಪ್ರಾತ್ಯಕ್ಷಿಕೆ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



# ವಿಶ್ವವಿದ್ಯಾಲಯದಲ್ಲಿ 2023-24ನೇ ಸಾಲಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ "ದೀಕ್ಷಾರಂಭ"

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮವಾದ "ದೀಕ್ಷಾರಂಭ"ವು ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯಿತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಬಿ. ಕೆ. ರವಿ ಅವರು ಆಗಮಿಸಿದ್ದು, ದೀಕ್ಷಾರಂಭ ಕಾರ್ಯಕ್ರಮದ ಸಾನಿಧ್ಯವನ್ನು ಪರಮಪೂಜ್ಯ ನಂದಿವೇರಿ ಮಠದ ಶ್ರೀ ಶಿವಕುಮಾರ ಸ್ವಾಮೀಜಿಗಳು ವಹಿಸಿದ್ದರು. ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ, ವಿಷ್ಣುಕಾಂತ ಎಸ್. ಚಟಪಲ್ಲಿ ಅವರು ಅಧ್ಯಕ್ಷೀಯ ನುಡಿಗಳನ್ನು ಹಾಗೂ ಕುಲಸಚಿವರಾದ ಪ್ರೊ. ಡಾ. ಸುರೇಶ್ ವಿ. ನಾಡಗೌಡರ ಅವರು ಸ್ವಾಗತ ಮತ್ತು ಆಶಯ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ವಿಶ್ವಮಾನವ ಸಂದೇಶ ಸಾರಿದ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನವನ್ನು ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಮಾಡುವ ಮೂಲಕ ಆಚರಿಸಲಾಯಿತು. ವಿಶ್ವವಿದ್ಯಾಲಯದ ಅಧಿಕಾರಿವರ್ಗ, ಬೋಧಕ-ಬೋಧಕೇತರ ಸಿಬ್ಬಂದಿ ವರ್ಗ ಹಾಗೂ ಪ್ರಥಮ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# Courses offered in the Uninversity

## POST GRADUATE PROGRAMMES

| Course | Programme |
|---|---|
| M.A. | Economics (Development Economics)<br>Cell : 8792734641 |
| M.Sc. | Computer Science (Data Analytics)<br>Cell : 9980205502 |
| M.Sc. | Geoinformatics (Remote Sensing & GIS)<br>Cell : 7892251362 |
| M.S.W. | Community Development (Rural Reconstruction) / Community Health<br>Cell : 8217721324 |
| M.P.H. | Master of Public Health<br>Cell : 9902591021 |
| M.Sc. | Food Science and Technology<br>Cell : 9880106636 |
| M.A. | Public Administration<br>Cell : 8095451616 |
| M.B.A. | Rural Management / Agribusiness Management<br>Cell : 7829864257 |
| M.A. | Rural Development & Panchayat Raj<br>Cell : 9448056077 |
| M.Com. | Entrepreneurship / Co-operative management<br>Cell : 9844456930 |

## UNDER GRADUATE PROGRAMMES

| Course | Programme |
|---|---|
| B.A. HONORS | Rural Development and Political Science<br>Cell : 9481191881 |
| B.Sc. HONORS | Public Health and Social Work<br>Cell : 9980791212 |
| B.Sc. HONORS | Geoinformatics and Computer Science<br>Cell : 9742111458 |
| B.Sc. HONORS | Agribusiness and Food Processing<br>Cell : 9164582650 |
| B.Com. HONORS | Innovation and Start-Ups<br>Cell : 8147118966 |

## DIPLOMA PROGRAMMES


**P.G. Diploma**
Geoinformatics (GIS & RS)
Cell : 7892251362

**Diploma**
Gandhian Thought and Action
Cell : 7353467453

**Diploma**
Co-operation and Banking Management
Cell : 9632062466

Admissions for the Post Graduate Programs as per National Education Policy 2020 and Guidelines of UGC and Government of Karnataka.

## ತರಬೇತಿ, ಪ್ರಕಟಣೆ ಹಾಗೂ ಮೇಲ್ವಿಚಾರಣೆ ಕೇಂದ್ರ



ಭಾರತದ ಭವಿಷ್ಯವು ಹಳ್ಳಿಗಳಲ್ಲಿ ಅಡಗಿದೆ

- ಮಹಾತ್ಮಾ ಗಾಂಧೀ




ಪ್ರಕಾಶಕರು

ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ

(ರೈತ ಭವನ, ಜನರಲ್ ಕಾರಿಯಪ್ಪ ವೃತ್ತ, ಗದಗ–582101, ಕರ್ನಾಟಕ, ಭಾರತ)

ವಿಶ್ವವಿದ್ಯಾಲಯದ ಆವರಣ, ನಾಗಾವಿ, ಗದಗ–582103

(ಪ್ರಾದೇಶಿಕ ಕಛೇರಿ : ಗ್ರಾಮೀಣಾಭಿವೃದ್ಧಿ ಭವನ, ನೆಲಮಹಡಿ, ಆನಂದರಾವ್ ವೃತ್ತ, ಬೆಂಗಳೂರು)

ಪೊ : (08372) 2900923 ವೆಬಸೈಟ್ : www.ksrdpru.ac.in